ಮತ ನಿರ್ದೇಶನದಲ್ಲಿ

# ಯುವ ಕರಾವಳಿ

Youth Know..

ಕನ್ನಡ ಮಾಸಿಕ ಪತ್ರಿಕೆ

ವಿದ್ಯಾರ್ಥಿಗಳಿಂದ, ಯುವಜನತೆಗಾಗಿ, ಸಮಾಜಕ್ಕೋಸ್ಕರ..

RNI No.: KNKAN/25/A0976

ಸಂಪುಟ: 01 | ಸಂಚಿಕೆ: 01 | ಜನವರಿ – 2026 | ಪುಟ: 8 | ಬೆಲೆ: ರೂ. 20/-

## ಪತ್ರಿಕೆಯ ಕುರಿತು




ವಿದ್ಯಾರ್ಥಿಗಳಲ್ಲಿರುವ ಬರವಣಿಗೆಯ ಕಲೆಯನ್ನು ಸಾರ್ವಜನಿಕರಿಗೆ ತಲುಪಿಸಲು ಒಂದು ವೇದಿಕೆ ನಿರ್ಮಾಣ ಮಾಡಬೇಕೆಂಬುದು ನನ್ನ ಬಹುದಿನದ ಕನಸಾಗಿತ್ತು. ಆ ಕನಸು ಇಂದು ಮಹತ್ತರವಾದ ಉದ್ದೇಶದೊಂದಿಗೆ ಆರಂಭವಾಗಿದೆ. ತಂತ್ರಜ್ಞಾನ ಎಷ್ಟೇ ಮುಂದುವರಿದರೂ, ಒಬ್ಬ ವ್ಯಕ್ತಿಗೆ ತನ್ನ ಮನಸ್ಸಿನ ಭಾವನೆಗಳನ್ನು ಯಾವುದೇ ಮುಚ್ಚುಮರೆಯಿಲ್ಲದೇ ಹೊರಹಾಕಲು ಇರುವ ಪ್ರಮುಖ ಮಾರ್ಗ ಅಥವಾ ಸಾಧನವೆಂದರೆ "ಬರವಣಿಗೆ".

ಶಾಲಾ–ಕಾಲೇಜಿನಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಲ್ಲಿ ಹಲವರಿಗೆ ಕಥೆ, ಕವನ, ಪ್ರಬಂಧ ಹಾಗು ಇನ್ನಿತರ ವಿಷಯಗಳ ಕುರಿತು ಲೇಖನಗಳನ್ನು ಬರೆಯುವ ಹವ್ಯಾಸವಿರುತ್ತದೆ. ಆದರೆ ಕೆಲವರಿಗೆ ತಮ್ಮ ಲೇಖನಗಳನ್ನು ಪ್ರಕಟಿಸಲು ಸರಿಯಾದ ವೇದಿಕೆ ಸಿಗುವುದಿಲ್ಲ. ವಿದ್ಯಾರ್ಥಿ ದೆಸೆಯಲ್ಲಿಯೇ ತಮ್ಮ ಬರವಣಿಗೆಗೆ ಉತ್ತಮ ಅವಕಾಶ ಸಿಕ್ಕ–ರೆ ಮುಂದಿನ ದಿನಗಳಲ್ಲಿ ಅದುವೇ ಕೆಲವರಿಗೆ ಜೀವನ ಕಟ್ಟಿಕೊಡಬಹುದು ಎನ್ನುವುದು ನಮ್ಮ ಅನಿಸಿಕೆ.

ಹಾಗಾಗಿ ವಿದ್ಯಾರ್ಥಿಗಳ ಜೊತೆಗೆ ಸಾರ್ವಜನಿಕರ (ಪತ್ರಿಕಾ ಚಂದಾದಾರರ) ಬರವಣಿಗೆಯ ಸಾಮರ್ಥ್ಯವನ್ನು ಬೆಂಬಲಿಸಿ ಪ್ರೋತ್ಸಾಹಿಸುವ ಸಲುವಾಗಿ, "ಜ್ಞಾನಸಂಗಮ ಟ್ರಸ್ಟ್(ರಿ.)" ಬ್ರಹ್ಮಾವರ ಇದರ ಸಂಸ್ಥಾಪಕರು ಸಂಬಂಧಪಟ್ಟ ಸರ್ಕಾರಿ ಇಲಾಖೆಯಿಂದ ಪರವಾನಿಗೆ ಪಡೆದು "ಯುವ ಕರಾವಳಿ" ಶೀರ್ಷಿಕೆಯ "ಕನ್ನಡ ಮಾಸಿಕ ಪತ್ರಿಕೆ"ಯನ್ನು ಆರಂಭಿಸಿರುವುದು.

ಪ್ರತೀ ಸಂಚಿಕೆಯಲ್ಲಿಯೂ ವಿವಿಧ ಶಾಲಾ–ಕಾಲೇಜಿನ ವಿದ್ಯಾರ್ಥಿಗಳ ಹಾಗು ಪತ್ರಿಕೆಯ ಚಂದಾದಾರ (ಸಾರ್ವಜನಿಕರ) ಲೇಖನಗಳನ್ನು ಪ್ರಕಟಿಸಲಾಗುತ್ತದೆ. ಪತ್ರಿಕೆಯು ಸಮಾಜದಲ್ಲಿನ ನೈಜತೆಯ ವಿಷಯ ಹಾಗು ವಿಚಾರಗಳನ್ನು ಸಾರ್ವಜನಿಕರೊಂದಿಗೆ ಸಮಾಲೋಚಿಸುವ ಉದ್ದೇಶದಿಂದ ಆರಂಭವಾಗಿರುವುದು.

ನಾವಿಲ್ಲಿ ಯಾರೊಂದಿಗೂ ಸ್ಪರ್ಧಿಸಲು ಬಂದಿಲ್ಲ. ನಮ್ಮ ಉದ್ದೇಶವಿಷ್ಟೇ "ಸಮಾಜದ ವಾಸ್ತವದ ನೈಜತೆಯನ್ನರಿಯಲು ವಿದ್ಯಾರ್ಥಿಗಳಿಂದ, ಯುವಜನತೆಗಾಗಿ, ಸಮಾಜಕ್ಕೋಸ್ಕರ ಇರುವ ವೇದಿಕೆ"..

## ನಮ್ಮ ಪತ್ರಿಕೆಯ ಉದ್ಘಾಟನೆ



ನಮ್ಮ "ಯುವ ಕರಾವಳಿ" ಕನ್ನಡ ಮಾಸಿಕ ಪತ್ರಿಕೆಯು ದಿನಾಂಕ: 05/11/2025 ರಂದು ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲೂಕಿನ ಪ್ರತಿಷ್ಠಿತ ಎಸ್.ಎಮ್.ಎಸ್. ಪದವಿ ಕಾಲೇಜಿನ ಮಿನಿ ಅಡಿಟೋರಿಯಂನಲ್ಲಿ ಉದ್ಘಾಟನೆಗೊಂಡಿತ್ತು. ಆ ಕಾಲೇಜಿನಲ್ಲಿ ನಮ್ಮ ಪತ್ರಿಕೆ ಉದ್ಘಾಟನೆಗೊಳ್ಳಲು ಪ್ರಮುಖ ಕಾರಣವೆಂದರೆ ನಾವು ಆ ಕಾಲೇಜಿನ ಪೂರ್ವ ವಿದ್ಯಾರ್ಥಿಗಳಾಗಿರುವುದರಿಂದ ಹಾಗು ಅಲ್ಲಿನ ಪ್ರಾಂಶುಪಾಲರು, ಆಡಳಿತ ಮಂಡಳಿ, ಪ್ರಾಧ್ಯಾಪಕರು ಮತ್ತು ಸಿಬ್ಬಂದಿವರ್ಗದವರ ಜೊತೆಗೆ ವಿದ್ಯಾರ್ಥಿಗಳು ನೀಡಿದ ಬೆಂಬಲ.

ನಮ್ಮ "ಯುವ ಕರಾವಳಿ" ಕನ್ನಡ ಮಾಸಿಕ ಪತ್ರಿಕೆಯ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್.ಎಮ್.ಎಸ್. ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ. ರಾಬರ್ಟ್ ರೋಡ್ರಿಗಸ್ ಜೆ. ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ ಅದೇ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ. ವೈ. ರವೀಂದ್ರನಾಥ ರಾವ್ ಹಾಗು ಶ್ರೀ ಪೂರ್ಣಪ್ರಜ್ಞ ಸಂಧ್ಯಾ ಕಾಲೇಜು, ಉಡುಪಿ ಇದರ ಪೂರ್ವ ಪ್ರಾಚಾರ್ಯರಾದ ಪ್ರೊ. ಸುಕನ್ಯಾ ಮೇರಿ ಜೆ. ಆಗಮಿಸಿದ್ದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಪತ್ರಿಕೆಯ ಪ್ರಧಾನ ಸಂಪಾದಕರಾದ ಶ್ರೀ ಮಹೇಶ ತಡೆಕಲ್ಲುರವರು ಪತ್ರಿಕೆಯ ಕುರಿತು ಪ್ರಾಸ್ತಾವಿಕ ಮಾತಿನ ನಂತರ ಅತಿಥಿಗಳು ಪತ್ರಿಕೆಯ ಮಹತ್ವದ ಕುರಿತು ವಿದ್ಯಾರ್ಥಿಗಳಾದಿಯಾಗಿ ಎಲ್ಲರಿಗೂ ಮನಮುಟ್ಟುವಂತೆ ತಿಳಿಸಿದರು. ಕಾಲೇಜಿನ ಕನ್ನಡ ವಿಭಾಗದ ಪ್ರಾಧ್ಯಾಪಕಿಯಾದ ಡಾ. ವಿದ್ಯಾಲತಾರವರು ಅತಿಥಿಗಳನ್ನು ಸ್ವಾಗತಿಸಿದರೆ, ಕಾಲೇಜಿನ ವಿದ್ಯಾರ್ಥಿಗಳು ಅತಿಥಿಗಳನ್ನು ಪರಿಚಯಿಸಿ, ವಂದಿಸಿ, ಉತ್ತಮವಾಗಿ ನಿರೂಪಿಸಿ ಕಾರ್ಯಕ್ರಮವನ್ನು ಚಂದಗಾಣಿಸಿದರು.



## ಪತ್ರಿಕೆಯ ಚಂದಾದಾರರಾಗಲು:




ಸಾರ್ವಜನಿಕರು **www.yuvakaravali.com** ನಲ್ಲಿ ಲಾಗಿನ್ ಆಗಿ ಅಗತ್ಯ ಮಾಹಿತಿ ನೀಡಿ ನೋಂದಣಿ ಮಾಡಿಸಿಕೊಂಡು ಹಣ ಪಾವತಿಸಿ ಚಂದಾದಾರರಾಗಬಹುದು. ಆಗ ಅವರಿಗೆ ಪತ್ರಿಕೆಯ ಕಡೆಯಿಂದ ರೆಫರಲ್ ಐಡಿ ನಂ. ಸಿಗುತ್ತದೆ. ಸ್ಮಾರ್ಟ್ ಫೋನ್ ಇಲ್ಲದ ಸಾರ್ವಜನಿಕರು ಸ್ಮಾರ್ಟ್‌ಫೋನ್ ಇರುವವರಿಗೆ ಹಣ ನೀಡಿ ಅವರ ಮೊಬೈಲಿನಲ್ಲೇ ನೋಂದಣಿ ಮಾಡಿಸಬಹುದು. ಇಲ್ಲವಾದಲ್ಲಿ ಪತ್ರಿಕಾ ಸಂಸ್ಥೆಗೆ ನೇರವಾಗಿ ಕರೆಮಾಡಿ ನೋಂದಣಿ ಮಾಡಿಸಿಕೊಳ್ಳಬಹುದು. (ಮೊಬೈಲ್– 7204708427, 8970015524).

ನೇರ ಪತ್ರಿಕಾ ಚಂದಾದಾರಿಕೆಯ ವಾರ್ಷಿಕ ಶುಲ್ಕ ಕೇವಲ ರೂ.400/– ಹಾಗು ಅವರು ನೀಡಿದ ವಿಳಾಸಕ್ಕೆ (ಉಡುಪಿ ಹಾಗು ದಕ್ಷಿಣ ಕನ್ನಡ ಜಿಲ್ಲೆಗಳಿಗೆ) ಪತ್ರಿಕೆ ಬರುತ್ತದೆ. ಇ–ಪೇಪರ್ ವಾರ್ಷಿಕ ಚಂದಾದಾರಿಕೆ ಕೇವಲ ರೂ.250/– ಇಲ್ಲಿ ಪತ್ರಿಕಾ ವೆಬ್‌ಸೈಟ್ ಲಾಗಿನ್ ಆಗಿ ಓದಬಹುದು.

ಪತ್ರಿಕೆಯನ್ನು ಯಾವಾಗ ಬೇಕಾದರು ಪಡೆಯಲು ಅವಕಾಶವಿರುತ್ತದೆ. ಹಾಗೆಯೇ "ನೇರ ಪತ್ರಿಕೆಯ" ಆಯಾ ವಾರ್ಷಿಕದ ಹಿಂದಿನ ಸಂಚಿಕೆಗಳು ಪಿಡಿಎಫ್ ರೂಪದಲ್ಲಿ ಅವರ ಮೊಬೈಲ್ ಅಥವಾ ಇಮೇಲ್'ಗೆ ಕಳುಹಿಸಲಾಗುತ್ತದೆ.

ವಿದ್ಯಾರ್ಥಿಗಳು ಪತ್ರಿಕಾ ವೆಬ್ಸೈಟ್ **www.yuvakaravali.com** ನಲ್ಲಿ "ವಿದ್ಯಾರ್ಥಿ ನೋಂದಣಿ" (1ನೇ ತರಗತಿ ಇಂದ ಸ್ನಾತಕೋತ್ತರ ಪದವಿ) ವಿಭಾಗದಲ್ಲಿ ಉಚಿತವಾಗಿ ನೋಂದಣಿ ಮಾಡಿಕೊಳ್ಳಬಹುದು. ನೋಂದಾಯಿಸಿ ಕೊಳ್ಳಲು ಕೇವಲ ವಿದ್ಯಾರ್ಥಿಯ ಹೆಸರು, ಮೊಬೈಲ್ ನಂ., ಮೇಲ್ ಐಡಿ ಹಾಕಿ ಶಾಲಾ ಅಥವಾ ಕಾಲೇಜು ಐಡಿ ಅಪ್‌ಲೋಡ್ ಮಾಡಿದರೆ ಸಾಕಾಗುತ್ತದೆ. ಆಗ ಅವರಿಗೆ ಪತ್ರಿಕೆಯ ಕಡೆಯಿಂದ ರೆಫರಲ್ ಐಡಿ ನಂ. ಸಿಗುತ್ತದೆ.

ಹಾಗೆಯೇ ವಿದ್ಯಾರ್ಥಿಗಳು ಪತ್ರಿಕಾ ವೆಬ್‌ಸೈಟಿನಲ್ಲಿ ಲಾಗಿನ್ ಆಗಿ ಪತ್ರಿಕೆಗೆ ಇತರರನ್ನು ಚಂದಾದಾರರನ್ನಾಗಿ ನೋಂದಾಯಿಸುವುದರಿಂದ ಲಾಭಗಳಿಸಬಹುದು. ಇದರ ಬಗ್ಗೆ ತಿಳಿಯಲು ನಮ್ಮ ವಾಟ್ಸಪ್ ನಂ. **7204708427, 8970015524** "ಸ್ಟುಡೆಂಟ್" ಎಂದು ಮೆಸೇಜ್ ಕಳುಹಿಸಿದರೆ ನಿಮಗೆ ಮಾಹಿತಿ ಸಿಗುತ್ತದೆ.

**ವಿಶೇಷ ಕೊಡುಗೆ:–**
**ವಿದ್ಯಾರ್ಥಿಗಳಿಗೆ ರೂ. 100/– ಕಡಿತ ದರದಲ್ಲಿ ಪತ್ರಿಕೆ ವಿತರಿಸಲಾಗುವುದು.**

## ಸಂಪಾದಕರ ನುಡಿ

"ಮನುಷ್ಯನ ಮನಸ್ಸಿನ ಭಾವನೆಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಬರವಣಿಗೆಗಿಂತ ಮಿಗಿಲಾದದ್ದು ಇನ್ನೊಂದಿಲ್ಲ"! –ಮತ

# ನಮ್ಮ ಟ್ರಸ್ಟ್



"ಜ್ಞಾನಸಂಗಮ ಟ್ರಸ್ಟ್(ರಿ.)" ಬ್ರಹ್ಮಾವರ ಇದು ದಿನಾಂಕ 30/12/2024ರಂದು ನೋಂದಣಿಗೊಂಡಿದೆ. ಇದನ್ನು ಶ್ರೀ ಮಹೇಶ ತಡೆಕಲ್ಲು ಹಾಗು ಶ್ರೀ ಪ್ರಜೀತ್ ಕುಮಾರ್ ಸೇರಿಕೊಂಡು ಆರಂಭಿಸಿದರು. ಈ ಟ್ರಸ್ಟ್‌ನ ಉದ್ದೇಶ "ವಿದ್ಯಾರ್ಥಿಗಳ ಸಬಲೀಕರಣ ಹಾಗು ಕಲ್ಯಾಣಕ್ಕಾಗಿ".

ಜ್ಞಾನಸಂಗಮ ಟ್ರಸ್ಟ್(ರಿ.) ಇದರ ಉದ್ಘಾಟನೆಯನ್ನು ಫೆಬ್ರವರಿ 22, 2025 ರಂದು ಎಸ್.ಎಮ್.ಎಸ್. ಪದವಿ ಕಾಲೇಜು, ಬ್ರಹ್ಮಾವರದಲ್ಲಿ ಆಗಮಿಸಿದ ಅತಿಥಿಗಳು ವಿವಿಧ ಕಾಲೇಜಿನ ವಿದ್ಯಾರ್ಥಿಗಳ ಸಮ್ಮುಖದಲ್ಲಿ ದೀಪ ಬೆಳಗುವುದರೊಂದಿಗೆ ನೆರವೇರಿಸಿದರು. ಆ ಕಾರ್ಯಕ್ರಮದ ಪ್ರಯುಕ್ತ ಉಡುಪಿ ಜಿಲ್ಲೆಯ ಪದವಿ ವಿದ್ಯಾರ್ಥಿಗಳಿಗಾಗಿ ಜಿಲ್ಲಾ ಮಟ್ಟದ "ರಸಪ್ರಶ್ನೆ ಸ್ಪರ್ಧೆ" ಆಯೋಜಿಸಲಾಗಿತ್ತು. ಉಡುಪಿ ಜಿಲ್ಲೆಯ ಒಟ್ಟು 14 ಕಾಲೇಜುಗಳ ವಿದ್ಯಾರ್ಥಿಗಳು ಸ್ಪರ್ಧಿಸಿದರು. ಹಾಗೆಯೇ ಅಂದು ಶ್ರೀ ಮಹೇಶ ತಡೆಕಲ್ಲು ಅವರು ಬರೆದ "ಮುನ್ನ" ಕಾಲ್ಪನಿಕ ಕಥಾಹಂದರದ ಕಾದಂಬರಿಯನ್ನು ಅತಿಥಿಗಳು ಅನಾವರಣಗೊಳಿಸಿದರು.

ಜ್ಞಾನಸಂಗಮ ಟ್ರಸ್ಟ್(ರಿ.) ಅಂದು ಆಯೋಜಿಸಿದ್ದ ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾದ ತಂಡಗಳಿಗೆ ಪ್ರಥಮ, ದ್ವಿತೀಯ, ತೃತೀಯ ಪ್ರಶಸ್ತಿ ಫಲಕದ ಜೊತೆಗೆ ನಗದು ಬಹುಮಾನವನ್ನು ನೀಡಲಾಗಿತ್ತು ಹಾಗು ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೂ "ಪ್ರಮಾಣ ಪತ್ರ" ನೀಡಲಾಗಿತ್ತು.

ಜ್ಞಾನಸಂಗಮ ಟ್ರಸ್ಟ್(ರಿ.) ಮುಂದಿನ ದಿನ ಗಳಲ್ಲಿಯೂ ಕೂಡ ವಿದ್ಯಾರ್ಥಿಗಳಿಗೆ ವಿವಿಧ ರೀತಿಯ ಸದುಪಯೋಗಿ ಕಾರ್ಯಕ್ರಮಗಳನ್ನು ಆಯೋಜಿಸಲು ಉತ್ಸುಕವಾಗಿದೆ. ಸಮಯ ಕೂಡಿ ಬಂದಾಗ ಅದು ಸಾಕಾರಗೊಳ್ಳುವುದು ಎಂದು ನಾವು ನಂಬಿದ್ದೇವೆ.

# ಬದಲಾಗಬೇಕಿದೆ!



ಈಗ ತಾನೇ ಹುಟ್ಟಿದ ಮಗು ಅಮ್ಮ ಎಂದು ಕೂಗುತ್ತಿದೆ. ಅಜ್ಜ, ಅಜ್ಜಿ, ಕುಟುಂಬದವರು ಮಗುವನ್ನು ನೋಡಲು ಕಾತರಿಸುತ್ತಿದ್ದಾರೆ. ಆಸ್ಪತ್ರೆಯ ಸಿಸ್ಟರ್ ಇನ್ನೇನು ಮಗುವನ್ನು ತನ್ನ ಕೈಯಲ್ಲಿ ಇಟ್ಟುಕೊಂಡು ಹೊರಗೆ ಬರುವಾಗ ಏನೋ ಒಂದು ಗಟ್ಟಿಯಾದ ಶಬ್ಧ ಕೇಳುತ್ತದೆ. ನೋಡ ನೋಡುತ್ತಿದ್ದಂತೆ ಸಮುದ್ರ ಉಕ್ಕಿ ಬಂದು ಎಲ್ಲವನ್ನು ಕೊಚ್ಚಿಕೊಂಡು ಹೋಗುತ್ತದೆ. ಎಲ್ಲರೂ ಸತ್ತು ಬಿದ್ದಿದ್ದಾರೆ. ಯಾರು? ಎಲ್ಲಿಯವರು? ಏನು ಕೂಡ ಗೊತ್ತಿಲ್ಲ?

ಮೇಲಿನ ಘಟನೆ ನೋಡಿದಾಗ ಭಯವಾಗುತ್ತದೆ. ಆದರೆ ಮುಂದೊಂದು ದಿನ ಈ ಘಟನೆ ಖಂಡಿತವಾಗಿಯೂ ಸಂಭವಿಸುತ್ತದೆ. ಮನುಷ್ಯನ ಅತಿಯಾದ ಸ್ವಾರ್ಥ, ಎಲ್ಲವನ್ನೂ ನಾಶ ಮಾಡುವ ಘಳಿಗೆ ಬಂದೇ ಬರುತ್ತದೆ. ಭೂಕಂಪ, ಭೂಕುಸಿತ, ಜಲಪ್ರಳಯ, ಜ್ವಾಲಾಮುಖಿ ಇದಕ್ಕೆಲ್ಲ ಕಾರಣಕರ್ತರು ನಾವೇ. ಭೂಮಿ ತನ್ನ ಸ್ವಾಧೀನವನ್ನು ಕಳೆದುಕೊಳ್ಳುತ್ತಿದೆ. ಇದೇ 10 ವರ್ಷದ ಹಿಂದೆ ಇದ್ದ ದಟ್ಟ ಅರಣ್ಯ ಈಗ ಎಲ್ಲಿ? ಮರಗಳ ಸಂಖ್ಯೆಯೇ ಕಡಿಮೆ ಮಾಡಿಬಿಟ್ಟಿದ್ದೇವೆ. ನಮ್ಮ ಮೊಬೈಲ್ ಅಲ್ಲಿ ಗಿಡ ನೆಟ್ಟಿದ್ದೇವೆ ಎನ್ನುವ ಪುರಾವೆಗೆ ಒಂದು ಫೋಟೋ ಅಷ್ಟೇ. ಗಿಡ ನೆಟ್ಟ ದಿನವೇ ನಾವು ಅದನ್ನು ನೋಡುವುದು ಅಲ್ಲಿಗೆ ಮುಗಿಯಿತು.

ಈ ಭೂಮಿ ಇರುವುದು ಸುಂದರ ಸ್ವಚ್ಚಂದ ಜೀವನ ನಡೆಸಲು. ಮನುಷ್ಯನಿಗೆ ಆಶ್ರಯ ನೀಡಿರುವ ಭೂಮಿಗೆ ನಾವು ಕೊಟ್ಟ ಕೊಡುಗೆ ಆಸ್ಕರ್ ಬಹುಮಾನವೇ? ಮೊದಲು ನನ್ನಲ್ಲಿ ನಾನು ಬದಲಾಗಬೇಕು. ಮುಂದಿನ ನಮ್ಮೆಲ್ಲರ ಮಕ್ಕಳಿಗೆ ಸುಖಕರವಾಗಿರುವ ಜೀವನ ಮಾಡಲು ಭೂಮಿಯನ್ನು ಉಳಿಸಬೇಕು. ಏ ಮನುಜ ಇನ್ನಾದರೂ ನಾವು ಬದಲಾಗಬೇಕಿದೆ?

ಶ್ರೀಲತಾ
ತೃತೀಯ ಬಿಕಾಂ
ಕ್ರಾಸ್ ಲ್ಯಾಂಡ್ ಕಾಲೇಜು, ಬ್ರಹ್ಮಾವರ.

# ಭಾರತೀಯ ಸಂವಿಧಾನ




ಭಾರತೀಯರಾದ ನಾವುಗಳು ಮಾನವೀಯ ಮೌಲ್ಯಗಳನ್ನೊಳಗೊಂಡ ನಮ್ಮ ಧರ್ಮಗಳ ಪವಿತ್ರ ಗ್ರಂಥಗಳ ಬಗ್ಗೆ ಅರಿತುಕೊಳ್ಳುವುದರೊಂದಿಗೆ ನಮ್ಮ ದೇಶದ ಘನತೆಯನ್ನು ಎತ್ತಿ ಹಿಡಿದಿರುವ "ಸಂವಿಧಾನ"ದ ಬಗ್ಗೆ ತಿಳಿದುಕೊಳ್ಳಲೇಬೇಕು. ಹಾಗಾಗಿ ನಮ್ಮ ಪತ್ರಿಕೆಯಲ್ಲಿ ಸಾಧ್ಯವಾದಷ್ಟು ಸಂವಿಧಾನದ ಬಗ್ಗೆ ಪ್ರತೀ ಸಂಚಿಕೆಯಲ್ಲಿ ಸಾರ್ವಜನಿಕರಿಗೆ ತಿಳಿಸಲು ಪ್ರಯತ್ನಿಸುತ್ತೇವೆ.

ನನ್ನ ಪ್ರಕಾರ, "ಸಂವಿಧಾನ ವೆಂದರೆ ಸಮಾನತೆ, ನೈತಿಕತೆ ಹಾಗು ಮಾನವೀಯತೆ". ಕಾನೂನು ಯಾವಾಗ ಈ ಮೂರು ಮಾನದಂಡದ ಮೇಲೆ ಕೆಲಸ ಮಾಡುತ್ತದೆಯೋ ಆಗ ಜನಸಾಮಾನ್ಯರಿಗೂ ನ್ಯಾಯ ಒದಗುತ್ತದೆ ಎನ್ನುವುದು ನನ್ನ ಅಭಿಪ್ರಾಯ.

ಭಾರತೀಯ ಸಂವಿಧಾನವನ್ನು ನವೆಂಬರ್ 26, 1949 ರಂದು ಅಂಗೀಕರಿಸಲಾಯಿತು ಹಾಗು ಜನವರಿ 26, 1950 ರಂದು ಜಾರಿಗೆ ತರಲಾಯಿತು. ಭಾರತೀಯ ಸಂವಿಧಾನದಲ್ಲಿ ಬ್ರಿಟಿಷ್, ಅಮೇರಿಕಾ, ಐರಿಶ್, ಕೆನಡಿಯನ್ ಸಂವಿಧಾನಗಳ ಅಂಶಗಳನ್ನು ಅಳವಡಿಸಲಾಗಿದೆ. ನಮ್ಮ ಸಂವಿಧಾನವು ವಿಶ್ವದ ಅತಿ ಉದ್ದದ ಲಿಖಿತ ಸಂವಿಧಾನವಾಗಿದ್ದು ಮೂಲತಃ 395 ವಿಧಿಗಳನ್ನು ಹೊಂದಿತ್ತು (22 ಭಾಗಗಳು, 8 ಅನುಸೂಚಿಗಳು). ಈಗ ತಿದ್ದುಪಡಿಗಳೊಂದಿಗೆ ಬದಲಾಗಿದೆ.

ಭಾರತೀಯ ಸಂವಿಧಾನವು 2ವರ್ಷ, 11 ತಿಂಗಳು, 18 ದಿನಗಳಲ್ಲಿ ರಚನೆಗೊಂಡಿತ್ತು. ಸಂವಿಧಾನ ರಚನೆಯ ಮುಖ್ಯ ಶಿಲ್ಪಿ ಹಾಗು ಕರಡು ಸಮಿತಿಯ ಅಧ್ಯಕ್ಷರು ಡಾ. ಬಿ. ಆರ್. ಅಂಬೇಡ್ಕರ್. ಕರಡು ಸಮಿತಿಯ ಸದಸ್ಯರುಗಳು ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಎನ್. ಮಾಧವ ರಾವ್, ಸಯ್ಯದ್ ಸಾದೂಲ್ಲಾ, ಎಸ್.ಎನ್. ಮುಖರ್ಜಿ, ಟಿ.ಟಿ. ಕೃಷ್ಣಮಾಚಾರಿ ಮತ್ತು ಕೆ.ಎಂ. ಮುನ್ಶಿ. ಸಂವಿಧಾನ ಸಭೆಯ ಅಧ್ಯಕ್ಷರು ಡಾ. ರಾಜೇಂದ್ರ ಪ್ರಸಾದ್. ಸಂವಿಧಾನದ ಸಾಂವಿಧಾನಿಕ ಸಲಹೆಗಾರರು ಬಿ. ಎನ್. ರಾವ್.

**ಸಂವಿಧಾನದ ಪೀಠಿಕೆ:–**

**ಸಾರ್ವಭೌಮ–** ಭಾರತ ತನ್ನ ಆಂತರಿಕ ಹಾಗು ಬಾಹ್ಯ ವ್ಯವಹಾರಗಳಲ್ಲಿ ಸ್ವತಂತ್ರವಾಗಿದೆ.

**ಸಮಾಜವಾದಿ–** ಸಂಪತ್ತಿನ ಹಂಚಿಕೆಯಲ್ಲಿ ಸಮಾನತೆ ಹಾಗು ಸಾಮಾಜಿಕ ನ್ಯಾಯವನ್ನು ಖಾತ್ರಿಪಡಿಸುತ್ತದೆ. ಜಾತ್ಯಾತೀತ–ರಾಜ್ಯಕ್ಕೆ ನಿರ್ದಿಷ್ಟ ಧರ್ಮವಿಲ್ಲ ಹಾಗು ಎಲ್ಲಾ ಧರ್ಮಗಳನ್ನು ಸಮಾನವಾಗಿ ಪರಿಗಣಿಸುತ್ತದೆ.

**ಪ್ರಜಾಸತ್ತಾತ್ಮಕ ಗಣರಾಜ್ಯ–** ಜನರು ತಮ್ಮ ಪ್ರತಿನಿಧಿಗಳನ್ನು ಚುನಾಯಿಸುವರು ಹಾಗು ದೇಶದ ರಾಷ್ಟ್ರಪತಿ ಆಯ್ಕೆಯಾಗುತ್ತಾರೆ (ಚುನಾಯಿತ ಜನಪ್ರತಿಯಿಂದ). ನ್ಯಾಯ–ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯದ ಭರವಸೆ. ಸ್ವಾತಂತ್ರ್ಯ– ಚಿಂತನೆ, ಅಭಿವ್ಯಕ್ತಿ, ನಂಬಿಕೆ, ಭಕ್ತಿ ಮತ್ತು ಆರಾಧನೆಗಳಲ್ಲಿ. ಸಮಾನತೆ– ಅವಕಾಶ ಹಾಗು ಸ್ಥಾನಮಾನಗಳಲ್ಲಿ ಸಮಾನತೆ. ಭ್ರಾತೃತ್ವ– ರಾಷ್ಟ್ರದ ಏಕತೆ ಹಾಗು ನಾಗರಿಕ ಘನತೆಯನ್ನು ಎತ್ತಿಹಿಡಿಯುತ್ತದೆ.

ಭಾರತೀಯ ಸಂವಿಧಾನದ ಪೀಠಿಕೆಯನ್ನು ಸಂವಿಧಾನದ "ಆತ್ಮ" ಎಂದು ಪರಿಗಣಿಸಲಾಗಿದೆ. ರಾಜ್ಯದ ಆಡಳಿತ ಹಾಗು ಕಾನೂನುಗಳ ರೂಪು ರೇಷೆಗಳಿಗೆ ಮಾರ್ಗದರ್ಶನ ನೀಡುತ್ತದೆ. ಭಾರತದ ಆದರ್ಶಗಳನ್ನು ಹಾಗು ಜನಸಾಮಾನ್ಯರ ಆಶಯಗಳನ್ನು ಎತ್ತಿ ಹಿಡಿಯುತ್ತದೆ.

**ಮುಂದುವರಿಯುವುದು..**

# ಭಾರತೀಯ ನ್ಯಾಯ ಸಂಹಿತಾ (BNS), 2023

ಭಾರತೀಯ ನ್ಯಾಯ ಸಂಹಿತಾ (BNS) 2023, ಭಾರತದ ಹಳೆಯ ಕ್ರಿಮಿನಲ್ ಕಾನೂನು ಗಳಾದ ಭಾರತೀಯ ದಂಡ ಸಂಹಿತೆ (IPC) 1860, ಕ್ರಿಮಿನಲ್ ಪ್ರೊಸೀಜರ್ ಕೋಡ್ (CRPC) 1973 ಮತ್ತು ಭಾರತೀಯ ಸಾಕ್ಷ್ಯ ಕಾಯಿದೆ (IEA) 1872ನ್ನು ಬದಲಿಸಿ ಬಂದಿದೆ. ಈ ಹೊಸ ಕಾನೂನುಗಳು 1 ಜುಲೈ 2024 ರಿಂದ ಜಾರಿಗೆ ಬಂದಿದ್ದು, ಅಪರಾಧಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಆಧುನೀಕರಣಗೊಳಿಸಿ, ತಂತ್ರಜ್ಞಾನ ಅಳವಡಿಸಿ, ನ್ಯಾಯ ವ್ಯವಸ್ಥೆಯನ್ನು ನಾಗರಿಕರಿಗೆ ಹೆಚ್ಚು ಸುಲಭ, ಪಾರದರ್ಶಕ ಮತ್ತು ಫಲಿತಾಂಶ ಆಧಾರಿತವಾಗಿಸುವುದನ್ನು ಗುರಿ ಹೊಂದಿದೆ. ಇದು ಸಂಘಟಿತ ಅಪರಾಧ, ಭಯೋತ್ಪಾದನೆ, ಮತ್ತು ಸೈಬರ್ ಅಪರಾಧಗಳಂತಹ ಹೊಸ ಅಪರಾಧಗಳನ್ನು ಸೇರಿಸಿದೆ, ಜೊತೆಗೆ ದೇಶದ್ರೋಹದಂತಹ ಕೆಲವು ಹಳೆಯ ನಿಬಂಧನೆಗಳನ್ನು ಪರಿಷ್ಕರಿಸಿದೆ.

**ಮುಖ್ಯ ಬದಲಾವಣೆಗಳು ಮತ್ತು ವೈಶಿಷ್ಟ್ಯಗಳು:**

***ವಸಾಹತುಶಾಹಿ ಕಾನೂನುಗಳ ಬದಲಾವಣೆ:** IPC, CRPC ಮತ್ತು IEA ಯನ್ನು ಬದಲಿಸಿ ದೇಶೀಯ ಕಾನೂನುಗಳನ್ನು ತರಲಾಗಿದೆ.

***ಆಧುನಿಕತೆ ಮತ್ತು ತಂತ್ರಜ್ಞಾನ:** ಸಾಕ್ಷ್ಯಗಳ ಭದ್ರತೆ ಹೆಚ್ಚಿಸಲು ಮತ್ತು ಪ್ರಕ್ರಿಯೆಗಳನ್ನು ಸುಗಮಗೊಳಿಸಲು ತಂತ್ರಜ್ಞಾನದ ಬಳಕೆ (ವಿಡಿಯೋ ಕಾನ್ಫರೆನ್ಸಿಂಗ್ ಹಾಗು ಇ–ಫೈಲಿಂಗ್).

***ನ್ಯಾಯಾಂಗ ಪ್ರಕ್ರಿಯೆ:** ನ್ಯಾಯಾಲಯಗಳ ಏಕರೂಪದ ವರ್ಗೀಕರಣ ಮತ್ತು ಸಮಯ ಆಧಾರಿತ ನ್ಯಾಯದತ್ತ ಗಮನ.

***ಗ್ರಾಹಕ–ಕೇಂದ್ರಿತ ವಿಧಾನ:** ಸಂತ್ರಸ್ತರು ಮತ್ತು ಸಾಕ್ಷಿಗಳಿಗೆ ಹೆಚ್ಚಿನ ಆದ್ಯತೆ.

***ಸಮುದಾಯ ಸೇವೆ:** ಶಿಕ್ಷೆಯ ರೂಪವಾಗಿ ಸಮುದಾಯ ಸೇವೆಯನ್ನು ಸೇರಿಸಲಾಗಿದೆ.

***ಹೊಸ ಅಪರಾಧಗಳು:** ಸಂಘಟಿತ ಅಪರಾಧ, ಭಯೋತ್ಪಾದನೆ, ಮತ್ತು ಸೈಬರ್ ಅಪರಾಧಗಳನ್ನು ವ್ಯಾಖ್ಯಾನಿಸಿ ಅಪರಾಧಗಳೆಂದು ಸೇರಿಸಲಾಗಿದೆ.

***ದೇಶದ್ರೋಹದ ಪರಿಷ್ಕರಣೆ:** ದೇಶದ್ರೋಹವನ್ನು ಸಾರ್ವಭೌಮತ್ವಕ್ಕೆ ಧಕ್ಕೆ ತರುವ ಕೃತ್ಯಗಳೆಂದು ಮರು ವ್ಯಾಖ್ಯಾನಿಸಲಾಗಿದೆ.

ಅನುಷ್ಠಾನ ಮತ್ತು ಪರಿಣಾಮ:

***ಅನುಷ್ಠಾನ:** ಅಧ್ಯಕ್ಷರ ಒಪ್ಪಿಗೆ ನಂತರ ಜುಲೈ 1, 2024 ರಿಂದ ಜಾರಿಗೆ.

***ಸವಾಲುಗಳು:** ಕಾನೂನು ವೃತ್ತಿಪರರು ಮತ್ತು ಜಾರಿ ಸಂಸ್ಥೆಗಳಿಗೆ ವ್ಯಾಪಕ ತರಬೇತಿ ಮತ್ತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕಾದ ಅಗತ್ಯ.

ಸಂಕ್ಷಿಪ್ತವಾಗಿ, BNS 2023 ಭಾರತದ ಕ್ರಿಮಿನಲ್ ಕಾನೂನು ವ್ಯವಸ್ಥೆಯನ್ನು ಆಧುನಿಕ ಭಾರತದ ಅಗತ್ಯಗಳಿಗೆ ಸರಿಹೊಂದುವಂತೆ ಸುಧಾರಿಸುವ ಒಂದು ಮಹತ್ವದ ಹೆಜ್ಜೆಯಾಗಿದೆ.

**ಮುಂದುವರಿಯುವುದು..**

## ಸಂಪಾದಕರ ನುಡಿ

"ಭಕ್ತಿ, ಪ್ರೀತಿ ಮತ್ತು ಭಾವನಾತ್ಮಕತೆಯ ವಿಷಯ ಬಂದಾಗ ಯಾವುದು ಜಾಸ್ತಿ ಪ್ರಚಾರದಲ್ಲಿರುತ್ತದೆಯೋ ಅದು ತನ್ನ ಮೌಲ್ಯವನ್ನು ಕಳೆದುಕೊಳ್ಳುವುದು. ಹಾಗೆಯೇ ಗೌಪ್ಯವಾಗಿರುವುದಕ್ಕೆ ಬೆಲೆ, ಗೌರವ ಜಾಸ್ತಿ". –ಮತ




ನನ್ನ ಪ್ರಕಾರ ಕೃಷಿ ಅಲ್ಲಿ ತೊಡಗಿಕೊಂಡಾಗ ಸಿಗುವ ಖುಷಿ ಬೇರೆಲ್ಲೂ ಸಿಗೋದು ಕಷ್ಟ. ನನ್ನ ಇದುವರೆಗಿನ ಜೀವನದ ದಾರಿಯಲ್ಲಿ ಪ್ರತೀ ವರ್ಷ ಒಮ್ಮೆಯಾದರೂ ಕೃಷಿ ಭೂಮಿಯಲ್ಲಿ ನನ್ನನ್ನು ತೊಡಗಿಸಿಕೊಳ್ಳುತ್ತೇನೆ ಎನ್ನುವ ಸಂತಸವಿದೆ. ಕೃಷಿ ಕಾರ್ಯಗಳಲ್ಲಿ ತೊಡಗಿದ ದಿನ ಕೆಲಸ ಮುಗಿಸಿ ಮನೆಗೆ ಬಂದಾಗ ಮರುದಿನ ಏಳುವುದೇ ಕಷ್ಟ ಅಂತ ಅನಿಸುತ್ತದೆ. ಆದರೆ ಮರುದಿನ ಎದ್ದು ಗದ್ದೆಯ ಕೆಸರಲ್ಲಿ ಮತ್ತೆ ಅಡಿಯಿಟ್ಟಾಗ ಉಲ್ಲಾಸ, ಉತ್ಸಾಹ ತಾನಾಗಿಯೇ ಬರುತ್ತದೆ. ಅದೇ ಭೂಮಿ ತಾಯಿಯ ಮಹಿಮೆ.

ಒಬ್ಬ ಯೋಗ್ಯ ರೈತನನ್ನು ಭೂಮಿ ತಾಯಿ ಎಂದಿಗೂ ಉಪವಾಸ ಮಲಗಲು ಬಿಡುವುದಿಲ್ಲ ಎನ್ನುವುದನ್ನು ನಾನು ಕಣ್ಣಾರೆ ನೋಡಿದ್ದೇನೆ. ಆದರೆ ಅತಿಯಾಸೆಗೆ ಕಡಿವಾಣ ಇರಲೇಬೇಕಲ್ಲವೇ. ಹಾಗಾಗಿ ಆಗೊಮ್ಮೆ, ಈಗೊಮ್ಮೆ ಸೋಲು ಸಹಜ. ಕೃಷಿಯಲ್ಲಿ ಅತಿಯಾದ ನಿರೀಕ್ಷೆ ಯಾವತ್ತೂ ಒಳ್ಳೆಯದಲ್ಲ ಯಾಕಂದ್ರೆ ಅದು ಪರಿಸರದ ವಾತಾವರಣಕ್ಕ ಹೊಂದಿಕೊಂಡಿರುವುದರಿಂದ ಪರಿಸ್ಥಿತಿ ಯಾವಾಗ ಹೇಗೆ ಬೇಕಾದರೂ ಬದಲಾಗಬಹುದು.

ಸದ್ಯದ ಪರಿಸ್ಥಿತಿಯನ್ನು ನೋಡಿದರೆ ಇನ್ನೊಂದು ಹತ್ತು ವರ್ಷಗಳಲ್ಲಿ ಕೃಷಿ ಕಡೆಗೆ ಯುವಜನತೆ ಹಾಗು ವಿದ್ಯಾವಂತರು ಮುಖ ಮಾಡಲೇಬೇಕು. ತಂತ್ರಜ್ಞಾನ ಎಷ್ಟೇ ಮುಂದುವರಿದರು ನಾವು ಆಹಾರವಾಗಿ ನೈಸರ್ಗಿಕವಾಗಿ ಬೆಳೆದಿರುವುದನ್ನೇ ತಿನ್ನಬೇಕೇ ವಿನಃ ಕೃತಕವಾದುದ್ದನ್ನಲ್ಲ. ಕೆಲವೊಂದು ಮೂಲಗಳ ಪ್ರಕಾರ ಜಗತ್ತಿನ ಹಲವು ದೊಡ್ಡ ದೊಡ್ಡ ಉದ್ಯಮಿಗಳು ಪ್ರಪಂಚದ ವಿವಿಧ ಕಡೆಗಳಲ್ಲಿ ಕೃಷಿಭೂಮಿಗಳನ್ನು ಖರೀದಿಸುತ್ತಿದ್ದಾರೆ ಎನ್ನುವ ಮಾಹಿತಿ ಇದೆ.

ಕೃಷಿ ಎನ್ನುವುದು ಕೇವಲ ಹಸಿರು ಬೆಳೆ, ಆಹಾರ ಉತ್ಪಾದನೆ ಹಾಗು ಬಳಕೆಯನ್ನು ಸೂಚಿಸುವ ಪದವಲ್ಲ. ಕೃಷಿ ಅಂದರೆ ಅನ್ವೇಷಣೆ ಅಂತ ಕೂಡ ನಾವು ಪರಿಗಣಿಸಬಹುದು. ಕೆಲವೊಮ್ಮೆ ನಾವು ಮಾತನಾಡುವಾಗ ಶಿಕ್ಷಣ ಕ್ಷೇತ್ರದಲ್ಲಿ ಕೃಷಿಯಾಗಬೇಕು, ಕೈಗಾರಿಕಾ ಕ್ಷೇತ್ರದಲ್ಲಿ ಕೃಷಿಯಾಗಬೇಕು, ವಿಜ್ಞಾನ ಹಾಗು ತಂತ್ರಜ್ಞಾನ ಕ್ಷೇತ್ರದಲ್ಲಿ ಕೃಷಿಯಾಗಬೇಕಿದೆ ಎನ್ನುವುದುಂಟು.

## ಕೆ. ಶಂಭುಶಂಕರ ರಾವ್:



ನಮ್ಮ ಪತ್ರಿಕೆಯ ಮೊದಲ ಸಂಚಿಕೆಯ ಕೃಷಿ ಸಾಧಕರು. ಇವರು ಉಡುಪಿ ಜಿಲ್ಲೆಯ, ಬ್ರಹ್ಮಾವರ ತಾಲ್ಲೂಕಿನ ಮಂದಾರ್ತಿಯ ಹೆಗ್ಗುಂಜೆಯವರು. ವಯಸ್ಸು ಸರಿಸುಮಾರು 68 ವರ್ಷ. ಒಬ್ಬ ವ್ಯಕ್ತಿ ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ ಎನ್ನುವುದಕ್ಕೆ ಹೆಜ್ಜುಕಡಿಮೆ ಆತನ ದೇಹಸ್ಥಿತಿ ಹಾಗು ಮಾತಿನ ವರಸೆಯಲ್ಲಿಯೇ ತಿಳಿಯುತ್ತದೆ. ವಾಣಿಜ್ಯ ಪದವಿಧರರಾದ ಶಂಭುಶಂಕರ'ರವರ ವೈಯಕ್ತಿಕ ಜೀವನದ ಬಗ್ಗೆ ನಾನು ತಿಳಿದುಕೊಳ್ಳಲು ಬಯಸಲಿಲ್ಲ, ನಮ್ಮ ಪತ್ರಿಕೆಗೆ ಅದರ ಅಗತ್ಯತೆ ಕೂಡ ಇಲ್ಲ.

ನಮ್ಮ ಪತ್ರಿಕೆಯ ಮೂಲಕ ಕೃಷಿ ಹಾಗು ರೈತರ ಬಗ್ಗೆ ವಿಚಾರ ವಿನಿಮಯವಾಗಬೇಕು ಮತ್ತು ಅದರಿಂದ ಕೆಲವೇ ಕೆಲವು ವಿದ್ಯಾರ್ಥಿ ಯುವ ಜನತೆಗಾದರೂ ಅದು ತಲುಪಬೇಕು ಎನ್ನುವ ಉದ್ದೇಶದಿಂದ "ಕೃಷಿ ಸಾಧಕರ ಪರಿಚಯ" ಎನ್ನುವ ಲೇಖನವನ್ನು ಪ್ರಕಟಿಸುವ ಹಂಬಲ ತೋರಿಸಿರುವುದು. ಹಾಗಾಗಿ ಕೃಷಿ ಸಾಧಕರ ಜಾಡು ಹಿಡಿದು ಉಡುಪಿ ಜಿಲ್ಲೆಯ ಜಿಲ್ಲಾಧಿಕಾರಿ ಕಚೇರಿಗೆ ಹೋದಾಗ ಅವರು ಕೃಷಿಯಲ್ಲಿ ಸಾಧಿಸಿ ಪ್ರಶಸ್ತಿ ಪಡೆದವರ ಒಂದು ಪಟ್ಟಿಯನ್ನು ನೀಡಿದರು. ಆ ಪಟ್ಟಿಯಲ್ಲಿ ಹತ್ತಿರದವರು ಯಾರು ಎಂದು ನೋಡಿದಾಗ ಇವರ ಹೆಸರು ಸಿಕ್ಕಿತು. ನಂತರ ಅವರಿಗೆ ಕರೆ ಮಾಡಿದಾಗ ಮಂದಾರ್ತಿ ದೇವಸ್ಥಾನದ ಮುಂಭಾಗದಲ್ಲಿರುವ ಅವರ ಕಚೇರಿಗೆ ಕರೆದು ಮಾಹಿತಿ ನೀಡಿದರು.

ಕೆ. ಶಂಭುಶಂಕರ'ರವರು ಹೇಳುವ ಪ್ರಕಾರ ಅವರಿಗೆ ಅಂದಾಜು 25ಎಕರೆ ಭೂಮಿ ಇದ್ದು ಅದರಲ್ಲಿ ಮಿಶ್ರ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ತೆಂಗು, ಅಡಿಕೆ, ಕಾಳುಮೆಣಸು, ಗೇರು, ವರ್ಷದಲ್ಲಿ ಎರಡು ಬಾರಿ ಭತ್ತದ ಬೆಳೆ, ತೋಟದ ಕೆಲವು ಭಾಗದಲ್ಲಿ ಮಹಾಗನಿ, ಸಾಗುವನಿ ಹಾಗು ಇನ್ನಿತರ ಗಿಡಗಳನ್ನು ಬೆಳೆಯುತ್ತಿದ್ದಾರೆ. ಹೈನುಗಾರಿಕೆಯಿಂದ ಸಿಗುವ ಗೊಬ್ಬರದ ಜೊತೆಗೆ ದೇವಸ್ಥಾನದ ಊಟದ ಎಲೆಗಳನ್ನು ಗುಂಡಿಯಲ್ಲಿ ಕೊಳೆಸಿ ಗೊಬ್ಬರವಾಗಿ ಬಳಸುತ್ತಿದ್ದು "ಕಸದಿಂದ ರಸ" ಎನ್ನುವುದನ್ನು ಸಾಬೀತುಪಡಿಸಿದ್ದಾರೆ. ಹಿಂದೊಮ್ಮೆ ಜೇನು ಹಾಗು ಮೀನಿನ ಕೃಷಿಗೂ ಪ್ರಯತ್ನಿಸಿದ್ದರಂತೆ ಆದರೆ ಕೆಲವೊಂದು ನೈಸರ್ಗಿಕ ಅಡಚಣೆಗಳಿಂದಾಗಿ ಅದನ್ನು ಬಿಟ್ಟಿರಬಹುದು.

ಕೃಷಿ ಭೂಮಿಗೆ "ಹನಿ ನೀರಾವರಿ" ಪದ್ಧತಿಯನ್ನು ಅನುಸರಿಸುವ ಅವರು ನೀರಿಗಾಗಿ ಕೆರೆ ಹಾಗು ಬಾವಿಯನ್ನು ಅನುಸರಿಸುತ್ತಿದ್ದಾರೆ. ಅವರು ಕೃಷಿಯಲ್ಲಾಗುವ ಹೊಸಹೊಸ ಅನ್ವೇಷಣೆ ಹಾಗು ಆವಿಷ್ಕಾರಗಳನ್ನು ಪ್ರಯತ್ನಿಸುತ್ತಾರೆ ಎನ್ನುವುದಕ್ಕೆ ಅವರ ಕಚೇರಿಯ ಟೇಬಲ್ ಮೇಲಿದ್ದ ರಾಜ್ಯದ ವಿವಿಧ ಭಾಗಗಳಿಂದ ಬಂದಿರುವ ಹಲವಾರು ಕೃಷಿ ಸಂಬಂಧಿತ ಪುಸ್ತಕಗಳೇ ಸಾಕ್ಷಿ.

ಶಂಭುಶಂಕರರವರು ಕೃಷಿ ಕ್ಷೇತ್ರದಲ್ಲಿ ವಿವಿಧ ಭಾಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಸಮಯ ಹಾಗು ಅವಕಾಶ ಸಿಕ್ಕಾಗ ತಮ್ಮಿಂದ ಎಷ್ಟು ಸಾಧ್ಯವೋ ಅಷ್ಟು ಜನರಿಗೆ ಕೃಷಿ ಕುರಿತು ಮಾಹಿತಿ ನೀಡುವರು.

**ಅವರ ಕಾರ್ಯ ಚಟುವಟಿಕೆಗಳ ಕುರಿತು ಕೆಲವು ಮಾಹಿತಿ–**

* 2009–10ನೇ ಸಾಲಿನಲ್ಲಿ ಕೃಷಿ ಇಲಾಖೆಯವರ ಸಹಕಾರದಲ್ಲಿ ತಮ್ಮ ಪರಿಸರದ ರೈತರಿಗೆ "ರೈತ ಕ್ಷೇತ್ರ ಪಾಠಶಾಲೆ" ಏರ್ಪಡಿಸಿರುವರು.
* 2011–12ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರದ ಕೃಷಿ ಇಲಾಖೆಯ "ಚೀನಾ ಕೃಷಿ ಅಧ್ಯಯನ" ಪ್ರವಾಸದಲ್ಲಿ ಭಾಗಿಯಾಗಿದ್ದರು ಹಾಗು ಅಲ್ಲಿಯ ಕೃಷಿ ಪದ್ಧತಿ ಬಗ್ಗೆ ಪರಿಸರದ ರೈತರಿಗೆ ಮಾಹಿತಿ ನೀಡಿದ್ದಾರೆ.
* ಬ್ರಹ್ಮಾವರ ವಲಯದ ಶಾಲಾ ಮಕ್ಕಳಿಗೆ "ಕೃಷಿ ದರ್ಶನ" ಕಾರ್ಯಕ್ರಮದಡಿ ತೋಟಕ್ಕೆ ಕರೆದುಕೊಂಡು ಹೋಗಿ ಕೃಷಿ ಕುರಿತು ಅವರಿಗೆ ಅಗತ್ಯ ಮಾಹಿತಿ ನೀಡಿದ್ದಾರೆ.
* ತಮ್ಮ ಪರಿಸರದ ರೈತರಿಗೆ ಕೃಷಿ ಇಲಾಖೆಯವರ ಸಹಕಾರದೊಂದಿಗೆ "ಶ್ರೀ ಪದ್ಧತಿ" ಬಗ್ಗೆ ಪ್ರಾತ್ಯಕ್ಷಿಕೆಯನ್ನು ಸ್ವಕ್ಷೇತ್ರದಲ್ಲಿ ಏರ್ಪಡಿಸಿ ಮಾಹಿತಿ ನೀಡಿ ಹೆಚ್ಚಿನ ರೈತರು ಇದರ ಪ್ರಯೋಜನ ಪಡೆಯುವಂತೆ ಪ್ರೇರೇಪಿಸಿದ್ದಾರೆ.
* ವಿವಿಧ ಸಂಸ್ಥೆಯವರ ಸಹಕಾರದಲ್ಲಿ ತಮ್ಮ ಕ್ಷೇತ್ರದಲ್ಲಿ ಪ್ರೌಢಶಾಲಾ ಮಕ್ಕಳಿಗೆ ಗಿಡಗಳ ಬೆಳೆಸುವಿಕೆ, ಕಸಿಕಟ್ಟುವುದು, ಭತ್ತ ನಾಟಿ ಕಾರ್ಯಕ್ರಮ ಹಮ್ಮಿಕೊಂಡು ಕೃಷಿ ಕುರಿತು ಮಕ್ಕಳಿಗೆ ಅರಿವು ಮೂಡಿಸಿದ್ದಾರೆ.
* ತಮ್ಮ ಕ್ಷೇತ್ರದಲ್ಲಿ ರಶ್ಮಿ ಉದ್ದಿನಬೇಳೆ, ಹಸಿರೆಲೆ ಗೊಬ್ಬರ, ರಸಸಾರ ಘಟಕ, ಕೃಷಿ ಯಾಂತ್ರೀಕರಣ ಬಗ್ಗೆ ಪ್ರಾತ್ಯಕ್ಷಿತೆ ಏರ್ಪಡಿಸಿ ರೈತರಿಗೆ ಮಾಹಿತಿ ನೀಡಿದ್ದಾರೆ.
* ವಿವಿಧ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ "ಸಂಪನ್ಮೂಲ ವ್ಯಕ್ತಿಯಾಗಿ" ಭಾಗವಹಿಸಿ ವಿದ್ಯಾರ್ಥಿಗಳಿಗೆ, ಯುವಜನತೆಗೆ ಹಾಗು ರೈತರಿಗೆ ತಾಂತ್ರಿಕ ಮಾಹಿತಿ ನೀಡುವಲ್ಲಿ ಯಶಸ್ವಿಯಾಗಿದ್ದಾರೆ.

**ಉತ್ಪನ್ನಗಳ ತಯಾರಿ:–**

* ತೆಂಗಿನಿಂದ – ಎಣ್ಣೆ, ಕೊಬ್ಬರಿ, ಚಿಪ್ಸ್ ಹಾಗು ಸಿಹಿತಿಂಡಿ ತಯಾರಿಸಿ ಮಾರಾಟ.
* ಗೇರು ಹಣ್ಣು – ಸಿರಪ್ ತಯಾರಿಸಿ ಮಾರಾಟ.
* ಕೋಕಂ ಹಣ್ಣು – ಸಿರಪ್ ತಯಾರಿಸಿ ಮಾರಾಟ.
* ಹಲಸು – ಹಪ್ಪಳ, ಚಿಪ್ಸ್ ಹಾಗು ಸಿಹಿತಿಂಡಿ ತಯಾರಿಸಿ ಮಾರಾಟ.
* ತೆಂಗು, ಗೇರು, ಕೊಕ್ಕೊ, ಭತ್ತದ ಬೀಜಗಳನ್ನು ವಿವಿಧ ಕೃಷಿ ಇಲಾಖೆ ಹಾಗು ರೈತ ಸಂಘಗಳಿಗೆ ಪೂರೈಕೆ.

**ಪ್ರಶಸ್ತಿ, ಸನ್ಮಾನಗಳು:–**

* 2008ನೇ ಸಾಲಿನಲ್ಲಿ ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿಂದ "ಕಾರ್ಪ್ ರೈತ ಪ್ರಶಸ್ತಿ".
* 2007–08ನೇ ಸಾಲಿನಲ್ಲಿ ಕೃಷಿ ಇಲಾಖೆಯಿಂದ ಭತ್ತದ ಬೆಳೆಗೆ ಉಡುಪಿ ತಾಲೂಕು ಮಟ್ಟದ "ಪ್ರಥಮ ಪ್ರಶಸ್ತಿ".
* 2009–10ನೇ ಸಾಲಿನಲ್ಲಿ ಉಡುಪಿ ತಾಲೂಕು ಮಟ್ಟದ "ಉತ್ತಮ ರೈತ ಪ್ರಶಸ್ತಿ".
* 2011–12ನೇ ಸಾಲಿನಲ್ಲಿ ಗೇರು ಮತ್ತು ಕೊಕ್ಕೊ ನಿರ್ದೇಶನಾಲಯ ಕೊಚ್ಚಿ ಇವರಿಂದ ಕೊಕ್ಕೊ ಮತ್ತು ಗೇರು "ಉತ್ತಮ ಬೆಳೆಗಾರ ಪ್ರಶಸ್ತಿ".
* 2012–13ನೇ ಸಾಲಿನಲ್ಲಿ ಕೃಷಿ ಇಲಾಖೆಯಿಂದ "ಚೀನಾ ಪ್ರವಾಸ".
* 2013–14ನೇ ಸಾಲಿನಲ್ಲಿ ಗುಜರಾತಿನ ಅಹಮದ'ಬಾದ್'ನಲ್ಲಿ ನಡೆದ ವಿಶ್ವ ಕೃಷಿ ಸಮ್ಮೇಳನದಲ್ಲಿ "ಉತ್ತಮ ರೈತ ಪ್ರಶಸ್ತಿ".
* 2013–14ನೇ ಸಾಲಿನ ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ಇವರಿಂದ ದಿ। ಮರಿಯಪ್ಪ ಗೌಡ ಸ್ಮಾರಕ "ಉತ್ತಮ ರೈತ ಪ್ರಶಸ್ತಿ".
* 2014–15ನೇ ಸಾಲಿನ ಉಡುಪಿ ಜಿಲ್ಲಾ "ಕನ್ನಡ ರಾಜ್ಯೋತ್ಸವ ಪ್ರಶಸ್ತಿ".

ಶಂಭುಶಂಕರ್'ರವರು ಮೇಲಿನ ಪ್ರಶಸ್ತಿಗಳನ್ನು ಮಾತ್ರವಲ್ಲದೇ ಸ್ಥಳೀಯ ವಿವಿಧ ಇಲಾಖೆಗಳು, ಸಂಘಸಂಸ್ಥೆಗಳಿಂದ ಹಲವಾರು ಪ್ರಶಸ್ತಿ, ಪುರಸ್ಕಾರ, ಸನ್ಮಾನಗಳನ್ನು ಪಡೆದ ಕೃಷಿ ಸಾಧಕರಾಗಿದ್ದಾರೆ. ಹಾಗೆಯೇ ಸ್ಥಳೀಯ ಅನೇಕ ಸಂಸ್ಥೆಗಳ ಪದಾಧಿಕಾರಿ ಹಾಗು ಸದಸ್ಯರಾಗಿ ಕಾರ್ಯನಿರ್ವಹಿಸಿದ ಅನುಭವ ಹೊಂದಿದ್ದಾರೆ.

ಕೃಷಿ ಕ್ಷೇತ್ರದಲ್ಲಿ ವಿಶಿಷ್ಟ ಹಾಗು ವಿಶೇಷವಾದ ಸಾಧನೆಗೈದಿರುವ ಕೆ. ಶಂಭುಶಂಕರ ರಾವ್'ರವರು ಇಂದಿನ ಯುವ ಪೀಳಿಗೆಗೆ ಸ್ಫೂರ್ತಿದಾಯಕರು ಹಾಗು ಮಾರ್ಗದರ್ಶಕರಾಗಿದ್ದಾರೆ. ಹಾಗೆಯೇ ಈಗಿನ ತಂತ್ರಜ್ಞಾನ ಯುಗದಲ್ಲಿ ಅವರು ಇನ್ನಷ್ಟು ಸಾಧಿಸಿ ಸಮಾಜಕ್ಕೆ ಇನ್ನೂ ಹೆಚ್ಚಿನ ಕೊಡುಗೆ ನೀಡುವಂತಾಗಲಿ, ಅದಕ್ಕಾಗಿ ಅವರಿಗೆ ಯಾವಾಗಲೂ ಉತ್ತಮ ಆರೋಗ್ಯ ಹಾಗು ಹೆಚ್ಚಿನ ಆಯಸ್ಸು ದೊರಕಲಿ ಎಂದು ಎಲ್ಲರ ಪರವಾಗಿ ಶುಭಹಾರೈಸುತ್ತೇವೆ.

**ಕವನ**

## ನಾವು ಎಂಥವರು?

ನಾವು ಎಂಥವರು?
ಅಂಥವರು, ಇಂಥವರು
ತಿಳಿ ತಿಳಿದು ತಪ್ಪೆಸಗುವವರು
ತಿಳಿ ನೀರಿಗೆ ಕಲ್ಲೆಸೆಯುವವರು
ಹಮ್ಮು ಬಿಮ್ಮಿನಲ್ಲೇ ಮೆರೆಯುವವರು
ಹೊರಲಾರದಷ್ಟು ಅಹಂ ಹೊತ್ತು
ತಿರುಗುವವರು
ಸುಖ ಮಾತ್ರ ಬಯಸುವವರು
ಸುಖಾ ಸುಮ್ಮನೆ ಗೊಣಗುವವರು
ಸಿಕ್ಕ ದಾರಿದ್ರ್ಯಕ್ಕೆ ಮರುಗುವವರು
ಸಂಕ್ರಮಣಕ್ಕೆ ಕಾಯುವವರು
ಮುಖವಾಡವ ಧರಿಸಿದವರು
ಮುಖ ನೋಡಿ ಮಣೆ ಹಾಕುವವರು
ತಮ್ಮ ತಮ್ಮನ್ನೇ ಹೊಗಳುವವರು
ತಪ್ಪು ಪರರದ್ದಾದರೆ ತೆಗಳುವವರು
ನಾನು ನನ್ನದು ಎನ್ನುವವರು
ಮೇಲಿನವರ ಕಾಲ ಎಳೆಯುವವರು
ಸಿಟ್ಟಿನ ಭರದಿ ತುಟಿ ಮೀರುವ
ಮಾತನಾಡುವವರು
ಗುಟ್ಟಿನ ವಿಷಯವ ರಟ್ಟು ಮಾಡುವವರು
ಬರಿದೆ ಬಾಯಿ ಬಡುಕರು
ಕುಡಿಯದಿದ್ದರೂ ಕುಡುಕರು
ಎಲ್ಲಾ ಬಲ್ಲವರು ಎಂದೆಂದುಕೊಂಡ
ಅರೆ ಬೆಂದವರು
ಎಲ್ಲಾದರೂ ಹೊಗಳಿದರೆ ನಮಗೆ
ಅವರೇ ಬಾಂಧವರು
ಸುಳ್ಳನ್ನೂ ನಿಜದಂತೆ ಹೇಳೋ ಮಳ್ಳರು
ಇಲ್ಲಿ ಸಿಕ್ಕಿಬಿದ್ದರಷ್ಟೇ ಕಳ್ಳರು.

–ಆಶಿಷ್ ಕುಮಾರ್
ತೃತೀಯ ಬಿ. ಎ(ಹೆಚ್ ಆರ್.ಎಸ್)
ಕ್ರಾಸ್ ಲ್ಯಾಂಡ್ ಕಾಲೇಜು, ಬ್ರಹ್ಮಾವರ

## ಪ್ರಕೃತಿ

ನಿನ್ನ ಮಡಿಲ ಮಕ್ಕಳು ನಾವು,
ನಿನ್ನ ಗರ್ಭಕ್ಕೆ ಕೈ ಹಾಕುತ್ತಿಹೆವು.
ನಿನ್ನ ಉಸಿರೇ ನಮ್ಮುಸಿರಾಗಿರುವಾಗ,
ನಿನ್ನ ಉಸಿರನ್ನೇ ಕಿತ್ತುಕೊಳ್ಳುತಿಹೆವು.

ನೀ ಕೊಟ್ಟ ಜೀವ ಜಲವ ಕುಡಿದು,
ನಿನ್ನ ಜೀವಕ್ಕೆ ಕಂಟಕವಾಗುತಿಹೆವು.
ನೀ ಕೊಟ್ಟ ಅನ್ನವ ತಿಂದು,
ನಿನ್ನ ಒಡಲಿಗೆ ವಿಷವಿಕ್ಕುತಿಹೆವು.

ನಿನ್ನ ಸಹನಾಶಕ್ತಿಯ ಪರೀಕ್ಷೆ ಮಾಡುತಿಹುದೆ,
ಈ ಕಲಿಯುಗದ ಜನರ ವಿಕೃತಿ.
ನಿನ್ನ ಒಡಲನೆ ಬರಿದು ಮಾಡ ಹೊರಟ,
ನಮ್ಮದು ಎಂಥ ಮನಸ್ಥಿತಿ?

ನಿನ್ನ ಆ ಕೋಪದ ಜ್ವಾಲೆಯ ಧಾರೆಯಲ್ಲಿ,
ಅಳಿದು ಹೋಗುವೆವು ಎನ್ನುವ ಭೀತಿ.
ಆದರೂ ನೀ ಇನ್ನುಸಹಿಸಿಕೊಂಡಿಹೆ ಎಂದರೆ,
ನೀ ಎಂತಹ ಸಹನಾಮೂರ್ತಿ.

–ಸುಧಿ ಆಚಾರ್ಯ
ಕ್ರಾಸ್ ಲ್ಯಾಂಡ್ ಕಾಲೇಜು, ಬ್ರಹ್ಮಾವರ.

**ಸಂಪಾದಕರ ನುಡಿ**

"ಓ ಬಾಲಿಕೆ, ಏನು ನಿನ್ನ ಚಡಪಡಿಕೆ? ಮುಗಿದಾಗ ಕಲಿಕೆ, ಸಿಕ್ಕಿತೇ ಸಡಿಲಿಕೆ? ಕಾತರದ ಬಯಕೆ, ಸಿಕ್ಕಾಗ ಆಗದಿರಲಿ ಕುಣಿಕೆ". –ಮತ

# ವ್ಯವಹಾರ ಕ್ಷೇತ್ರದ ಸಾಧಕರು



ಮನುಷ್ಯ ತನ್ನ ಬದುಕಿನಲ್ಲಿ ಈ ಎರಡು ಮುಖ್ಯವಾದ ಅಂಶಗಳಲ್ಲಿ ಯಾವುದಾದರೊಂದರಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಳ್ಳಲೇಬೇಕು. ಇಲ್ಲವಾದರೆ ಜೀವನ ಸಾಗಿಸುವುದು ಅಸಾಧ್ಯ. ಆ ಎರಡು ಅಂಶ ಗಳಾವುದೆಂದರೆ ಒಂದು ಉದ್ಯಮ, ಇನ್ನೊಂದು ಉದ್ಯೋಗ. ಕೆಲವರು ಎರಡರಲ್ಲೂ ತಮ್ಮನ್ನು ತೊಡಗಿಸಿಕೊಂಡು ಯಶಸ್ವಿಯಾದರೆ, ಇನ್ನು ಕೆಲವರು ಒಂದರಲ್ಲಿಯೂ ಪರಿಪಕ್ವತೆ ಗಳಿಸಲಾಗದೇ ಪರಿತಪಿಸುತ್ತಿದ್ದಾರೆ.

ನಾವು ಮಾಡುವ ಉದ್ಯೋಗ ಅಥವಾ ಉದ್ಯಮ ಚಿಕ್ಕದಾದರೂ ಪರವಾಗಿಲ್ಲ ಆದರೆ ಅದು ನಮಗೆ ಜೀವನ ಸಾಗಿಸುವಷ್ಟು ಗಳಿಕೆ ನೀಡಿದರೂ ಸಾಕು. ಮನುಷ್ಯ ಅಲ್ಪತೃಪ್ತ ಎನ್ನುವುದು ಎಲ್ಲರಿಗೂ ತಿಳಿದ ವಿಚಾರವೇ.

ಇತ್ತೀಚಿನ ದಿನಗಳಲ್ಲಿ ಮನುಷ್ಯ ಕಷ್ಟಪಡದೇ ಸುಖ ಸಿಗಬೇಕು ಎನ್ನುವ ಇರಾದೆಯಲ್ಲಿದ್ದಾನೆ.! ವ್ಯವಹಾರದಲ್ಲಿ ಹೂಡಿಕೆ ಮಾಡಿದ ಕೂಡಲೇ ಅದು ಕೋಟಿಯಾಗಬೇಕು, ಉದ್ಯೋಗ ಸೇರುತ್ತಾ ಭಡ್ತಿ ಸಿಗಬೇಕು ಎನ್ನುವ ಅತಿಯಾಸೆ ಇಂದು ನಮ್ಮವರನ್ನು ನೆಮ್ಮದಿಯಿಂದ ನಿದ್ರೆ ಮಾಡದಂತೆ ಮಾಡಿದೆ.!

ಈಗಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಸ್ವಂತ ವ್ಯವಹಾರದಲ್ಲಿ ತೊಡಗಿಕೊಳ್ಳುವುದಕ್ಕಿಂತ ಯಾವುದಾದರೂ ಉದ್ಯೋಗದಲ್ಲಿ ತೊಡಗಿಕೊಳ್ಳುವುದೇ ಲೇಸು ಅಂತ ಅನಿಸುತ್ತದೆ. 2015 ಇಸವಿಯ ಮೊದಲು ವ್ಯವಹಾರ, ಉದ್ಯಮಗಳನ್ನು ಆರಂಭಿಸಿ ಯಶಸ್ವಿಯಾದವರೇ ಇವತ್ತಿಗೂ ಸದೃಢವಾಗಿರೋದು ಎಂದರೂ ತಪ್ಪಾಗಲಾರದೇನೋ.! ಇಂದು ಯಾರಾದರೂ ಸ್ವ-ಉದ್ಯಮ ಆರಂಭಿಸುವುದಿದ್ದರೆ ತಮ್ಮ ಉತ್ಪಾದನೆಗೆ ಗ್ರಾಹಕರನ್ನು ಸೃಷ್ಟಿಸಿಕೊಂಡೇ ಉದ್ಯಮ ಆರಂಭಿಸಿದರೆ ಉತ್ತಮ.

ನಮ್ಮ ಸುತ್ತಮುತ್ತಲಿನ ಪರಿಸರದಿಂದ ಹಿಡಿದು ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಉದ್ಯಮ/ವ್ಯವಹಾರ ಕ್ಷೇತ್ರದಲ್ಲಿ ಸಾಧಿಸಿದವರು ಅಸಂಖ್ಯಾತರು ಇದ್ದಾರೆ. ಅವರೆಲ್ಲರೂ ನಮ್ಮ ಈಗಿನ ವಿದ್ಯಾರ್ಥಿಗಳು ಹಾಗು ಯುವಜನತೆಗೆ ಸ್ಫೂರ್ತಿ, ಮಾರ್ಗದರ್ಶನವಾದರೆ ಮುಂದಿನ ಪೀಳಿಗೆಗೆ ಸಾಧಕರಾಗುತ್ತಾರೆ.

ನಮ್ಮ ದೇಶದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಯಶಸ್ವಿಯಾದ ಉದ್ಯಮಿಗಳೆಂದರೆ ಟಾಟಾ ಗ್ರೂಪ್, ಅಂಬಾನಿ ಕುಟುಂಬ, ಅದಾನಿ ಗ್ರೂಪ್, ಅಜೀಂ ಪ್ರೇಮ್‌ಜಿ, ನಾರಾಯಣ ಮೂರ್ತಿ ಮತ್ತು ಸುಧಾ ಮೂರ್ತಿ ಹಾಗು ಇನ್ನೂ ಹಲವಾರು ಜನ ಇದ್ದಾರೆ. ಹಿಂದಿನ ಕಾಲದಲ್ಲಿ ಒಂದು ವ್ಯವಹಾರವನ್ನು ಸಣ್ಣ ಮಟ್ಟದಲ್ಲಿ ಆರಂಭಿಸಿ ಮುಂದೆ ದೊಡ್ಡ ಮಟ್ಟದಲ್ಲಿ ಬೆಳೆದವರೇ ಜಾಸ್ತಿ. ಆದರೆ ಇಂದು ದೊಡ್ಡ ಮಟ್ಟದಲ್ಲಿ ವ್ಯವಹಾರ ಆರಂಭಿಸಿದರೂ ಕೂಡ ಯಶಸ್ವಿಯಾಗೋದು ಬಹಳ ಕಷ್ಟ.

ನಮ್ಮ ಪತ್ರಿಕೆಯ ಉದ್ದೇಶ ಏನೆಂದರೆ, ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಸಣ್ಣ ಅಥವಾ ದೊಡ್ಡ ಮಟ್ಟದಲ್ಲಿ ವ್ಯವಹಾರ ಆರಂಭಿಸಿ ಯಶಸ್ವಿಯಾದವರ ಪರಿಚಯವಾಗಬೇಕು ಎನ್ನುವುದಾಗಿದೆ. ಹಾಗೆಯೇ ಅಂತಹ ಸಾಧಕರ ಕುರಿತು ವಿದ್ಯಾರ್ಥಿಗಳು ಹಾಗು ಪತ್ರಿಕೆಯ ಚಂದಾದಾರರೇ ಅಧ್ಯಯನ ಮಾಡಿ ನಮಗೆ ಮಾಹಿತಿ ಕಳುಹಿಸಿದರೆ ಅದಕ್ಕೆ ಮಹತ್ವ ಜಾಸ್ತಿ ಎನ್ನುವುದು ನಮ್ಮ ಅನಿಸಿಕೆ. ಹಾಗಾಗಿ ನೀವುಗಳು ಉತ್ತಮ ಸ್ಫೂರ್ತಿದಾಯಕ ಉದ್ಯಮಿಯ ಕುರಿತು ಯಾವುದೇ ಮೂಲಗಳಿಂದ ಮಾಹಿತಿ ಸಂಗ್ರಹಿಸಿ ನಮಗೆ ಕಳುಹಿಸಿದರೆ ಅದನ್ನು ನಾವು ಪರಿಶೀಲಿಸಿ ನಿಮ್ಮ ಹೆಸರಿನೊಂದಿಗೆ ಪತ್ರಿಕೆಯಲ್ಲಿ ಪ್ರಕಟಿಸುತ್ತೇವೆ.

# ಬದುಕ ಬರಹವನು ಬರೆದು ಬಿಡಿ ಪೆನ್ನಿನಲ್ಲೇ..



ಎಲ್ಲರ ಬದುಕಿನ ಪುಟದಲ್ಲೂ ಸಾವಿರ ಚಿತ್ತುಗಳಿದ್ದಿರುತ್ತದೆ. ತಪ್ಪು ಚಿತ್ತುಗಳಿಲ್ಲದ ಪುಟಗಳಲ್ಲಿ, ಓದುವವರಿಗೂ ಸಹ ಚಿತ್ತುಗಳನ್ನು ಓದಲಾಗುವುದಿಲ್ಲ. ಬರೆದ ಬರಹವನ್ನೇ ಓದುವರು ಚಿತ್ತನ್ನಲ್ಲ. ಹಾಗಾಗಿ ನಿಮ್ಮ ಬದುಕಿನ ಬರಹವನು ಬರೆದು ಬಿಡಿ ಪೆನ್ನಿನಲ್ಲೇ. ಏಕೆಂದರೆ ಒಮ್ಮೊಮ್ಮೆ ತಪ್ಪುಗಳಿಗೆ ಹೆದರಿ ಬರೆಯುವುದನೇ ಬಿಟ್ಟು ಬಿಡುವ ಯೋಚನೆಗಳು ತಲೆಯಲ್ಲಿ ಸುಳಿಯಬಹುದು. ಹಾಗಾಗಿ ಬರೆದು ಬಿಡಿ ಬದುಕಿನ ಬರಹವನ್ನು ಪೆನ್ನಿನಲ್ಲೆ.

ಪೆನ್ನಿನಲ್ಲೇ ಏಕೆ ಬರೆಯಬೇಕು.? ಪೆನ್ಸಿಲ್ ನಲ್ಲಿ ಬರೆದರಾಗದೆ.? ಎಂಬ ಪ್ರಶ್ನೆ ಮೂಡಿದರೆ ತಪ್ಪೇನಿಲ್ಲಾ. ಬದುಕು ತಪ್ಪಾಗಬಾರದೆಂಬ ನಿಮ್ಮ ಸುಪ್ತ ಮನಸ್ಸು ಈ ರೀತಿ ಯೋಚಿಸುವಂತೆ ಮಾಡುತ್ತಿದೆ. ಆದರೆ ಪೆನ್ಸಿಲ್‌ನಲ್ಲಿ ಬರೆದರೆ ಬರವಣಿಗೆ ನೈಜವಾಗಿ ಮೂಡಿ ಬರುವುದಿಲ್ಲ ಅನ್ನುವುದು ನನ್ನ ಅನಿಸಿಕೆ. ಅಷ್ಟೇ ಅಲ್ಲದೆ, ಚಿತ್ತಾಗಬಾರದೆಂಬ ಆಲೋಚನೆಯಲ್ಲಿ ಅಳಿಸಿ ಬರೆಯಬಹುದೆಂಬ ದೂರಾಲೋಚನೆಯಲ್ಲಿ ನೀವೇನು ಬರೆಯಬೇಕೆಂದಿರುವಿರೋ ಅದು ನೇರವಾಗಿ ಬದುಕ ಪುಟದಲ್ಲಿ ಇಳಿಯುವುದಿಲ್ಲ. ಇನ್ನೊಂದು ಮುಖ್ಯವಾದ ವಿಷಯವೇನೆಂದರೆ ನಿಮ್ಮ ಬದುಕಿನ ಬರಹಗಳು ಒಮ್ಮೊಮ್ಮೆ ನಿಮಗೇ ಹಿಡಿಸದೆ... ನೀವೇ ಅದನ್ನು ಅಳಿಸಿಬಿಡಬಹುದು ಅಥವಾ ಇನ್ಯಾರೋ ಬಂದು ಅಳಿಸಿ ಹೋಗಬಹುದು. ಹಾಗಾಗಿ ಹೇಳುತ್ತಿರುವೆ ಬದುಕನ್ನು ಬರೆಯುವ ಮನಸ್ಸಾದರೆ ಬರೆದುಬಿಡಿ ಪೆನ್ನಿನಲ್ಲೇ..

**ಬದುಕ ಬರಹವನು ಬರೆದು ಬಿಡಿ ಪೆನ್ನಿನಲ್ಲೇ.. ತಪ್ಪಾಗುವುದೆಂಬ ಭಯಬೇಡ, ಚಿತ್ತಾಗುವುದೆಂಬ ದುಗುಡಬೇಡ, ತಪ್ಪಾದರೆ ಮತ್ತೆ ಸರಿಪಡಿಸಿ ಬರೆಯಬಹುದು..**

**ಪ್ರತಿಮಾ ರಾಮಚಂದ್ರ**
ಉಪನ್ಯಾಸಕಿ, ಸಮಾಜಶಾಸ್ತ್ರ ವಿಭಾಗ,
ಎಸ್. ಎಮ್. ಎಸ್ ಕಾಲೇಜು, ಬ್ರಹ್ಮಾವರ

# ನಮ್ಮ (ವಿದಾರ್ಥಿ, ಯುವಜನತೆಯ..) ಸರ್ಕಾರ ಆಡಳಿತದಲ್ಲಿದ್ದರೆ.!

ಪ್ರಸ್ತುತ ರಾಜಕೀಯ ವ್ಯವಸ್ಥೆಯ ದುರವಸ್ಥೆಯನ್ನು ಅರಿತವರು ಸಮಯ ಸಿಕ್ಕಾಗ ಅದರ ಕುರಿತು ವಿಚಾರವಂತರೊಂದಿಗೆ ಚರ್ಚಿಸುವಾಗ ಬರುವ ಕೆಲವೊಂದು ವಿಷಯಗಳು- ಸ್ಮಾರ್ಟ್‌ಫೋನ್ ಬಂದ ಮೇಲೆ ಈಗಿನ ಕಾಲದ ಯುವಜನತೆಯಲ್ಲಿ ಸ್ವಂತಿಕೆ ಇಲ್ಲ, ಗುಂಪಲ್ಲಿ ಗೋವಿಂದ ಹಾಕಲು ಮುಂದಿರುತ್ತಾರೆ ಆದರೆ ಒಬ್ಬೊಬ್ಬರಾಗಿ ಮುಂದೆ ಬಂದು ತಪ್ಪನ್ನು ಪ್ರಶ್ನಿಸುವ ಧೈರ್ಯವಿಲ್ಲ. ಒಂದುವೇಳೆ ಅವರಲ್ಲಿ ಅಂತಹ ಧೈರ್ಯ, ಆತ್ಮವಿಶ್ವಾಸ ಇದ್ದಿದ್ದರೆ ಅವರ್‍ಯಾಕೆ ಭ್ರಷ್ಟ ರಾಜಕೀಯ ಪಕ್ಷಗಳ ರಾಜಕಾರಣಿಗಳ ಪರ ಚುನಾವಣೆಯಲ್ಲಿ ಪ್ರಚಾರಕ್ಕೆ ಹೋಗುತ್ತಿದ್ದರು.? ಯಾವುದೇ ಪಕ್ಷದ ಸರ್ಕಾರ ಬಂದರೂ ಕೂಡ ಪ್ರತೀ ಬಾರಿ ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಶಿಕ್ಷಕರ ನೇಮಕಾತಿಯಲ್ಲಿ ವಿಳಂಬ ಅಥವಾ ಶಿಕ್ಷಕರ ಅಭಾವವಾದಾಗ ಯಾಕೆ ಸುಮ್ಮನಿರುತ್ತಿದ್ದರು.?

ನಿಜ, ನಾವು ಕಲಿಯುವ ಶಿಕ್ಷಣದಲ್ಲಿ ವಾಸ್ತವದ ನೈಜತೆ, ನೈತಿಕತೆ, ಸಮಾನತೆ, ಮಾನವೀಯತೆ ಇಲ್ಲದಿದ್ದರೆ ಯಾವುದೇ ವಿದ್ಯಾರ್ಥಿಗಾದರು ಸಮಾಜವನ್ನು ಅರಿಯಲು ಕಷ್ಟವಾಗುತ್ತದೆ. ನಮ್ಮ ಹೆತ್ತವರು ಹಾಗು ಅವರ ಪೋಷಕರಿಂದ ಹಿಡಿದು ಇಲ್ಲಿಯವರೆಗೆ ನಮ್ಮನ್ನು ಸೇರಿ ಮಕ್ಕಳ ಪಠ್ಯಕ್ರಮದಲ್ಲಿ ಎಂದೋ ಸತ್ತು ಮಣ್ಣಾಗಿರುವ ಗೋಡ್ಸೆ, ಸಾವರ್ಕರ್, ಟಿಪ್ಪು ಸುಲ್ತಾನ್ ಬಗ್ಗೆ ಪಾಠ ಸೇರಿಸಿ ಅಂತ ಬೊಬ್ಬೆ ಹಾಕಿದ್ದೇವೆಯೇ ವಿನಃ ಎಂದಿಗೂ ಕೂಡ ಗ್ರಾಮ ಪಂಚಾಯತ್ ಇಂದ ಹಿಡಿದು ಜಿಲ್ಲಾಧಿಕಾರಿ ಕಚೇರಿ ತನಕ ಇರುವ ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರಿಗೆ ಯಾವುದೆಲ್ಲಾ ಸರ್ಕಾರಿ ಸೇವೆಗಳು/ಕಾರ್ಯಗಳು ಇರುತ್ತವೆ, ಅವುಗಳಿಗೆ ತಗಲುವ ಶುಲ್ಕವೆಷ್ಟು ಹಾಗು ಅವುಗಳನ್ನು ಪಡೆಯಲು ಇರುವ ಅವಧಿ ಎಷ್ಟು ಎಂದು ಪಠ್ಯಪುಸ್ತಕದಲ್ಲಿ ಸೇರಿಸಲು ಬಯಸಲಿಲ್ಲ. ಆ ಕುರಿತು ಕನ್ನಡ ಅಥವಾ ಸಮಾಜ ಪಠ್ಯಪುಸ್ತಕದಲ್ಲಿ ವಿದ್ಯಾರ್ಥಿಗಳಿಗೆ ಪಾಠ ಸೇರಿಸಿದ್ದರೆ ಇಂದು ಭ್ರಷ್ಟಾಚಾರ ಸ್ವಲ್ಪ ಮಟ್ಟಿಗಾದರೂ ಕಡಿಮೆ ಆಗುತಿತ್ತು.



ಶಿಕ್ಷಣ ಕಲಿತು ವಿದ್ಯಾವಂತರಾದ ನಾವುಗಳೇ ಸಮಾಜದಲ್ಲಿನ ವಾಸ್ತವದ ನೈಜತೆಯನ್ನು ಗಾಳಿಗೆ ತೂರಿ ರಾಜಕಾರಣಿಗಳ ಅಂಧಭಕ್ತಿಯ ಗುಲಾಮರಾದಾಗ ನಮ್ಮಿಂದ ಮೊಳಕೆಯೊಡೆದ ಬೀಜಗಳು ಚಿಗುರಿದ ಮೇಲೆ "ಸಾಮಾನ್ಯ ಜ್ಞಾನವುಳ್ಳ" ಪ್ರಜೆಯಾಗಲು ಸಾಧ್ಯವೇ.?

ಹೀಗಿರುವಾಗ ರಾಜಕೀಯ ವಿಷಯದಲ್ಲಿ ಬದಲಾವಣೆ ಅಸಾಧ್ಯವೆಂದು ವಿಶ್ವದ 99% ಜನ ಬೊಬ್ಬೆ ಹೊಡೆದರೂ ಕೂಡ ನನ್ನಂಥ 1% ಜನ ದೇಶದ "ಯುವಜನತೆ" ಮನಸ್ಸು ಮಾಡಿದರೆ ಅದು ಸುಲಭಸಾಧ್ಯ ಎಂದು ನಂಬಿದ್ದೇವೆ. ಆ ನಂಬಿಕೆಯ ಕನಸಿನ ಒಂದು ಭಾಗವೇ ಈ "ಯುವಕರಾವಳಿ" ಪತ್ರಿಕೆ.

ನಮ್ಮ ಸರ್ಕಾರವೆಂದರೆ, ವಿದ್ಯಾರ್ಥಿ ಹಾಗು ಯುವಜನತೆಯ ಸರ್ಕಾರ. ಇಲ್ಲಿ ಗ್ರಾಮ ಪಂಚಾಯತ್ ಚುನಾವಣೆ ಇಂದ ಹಿಡಿದು ಲೋಕಸಭಾ ಚುನಾವಣೆಯ ತನಕ 50 ವರ್ಷ ವಯಸ್ಸಿನ ಒಳಗಿನವರೇ ಸ್ಪರ್ಧಿಸಬೇಕು. ಒಬ್ಬ ಪದವಿ ಓದುತ್ತಿರುವ ಅಥವಾ ಅದಕ್ಕಿಂತ ಹೆಚ್ಚಿನ ಶಿಕ್ಷಣ ಪಡೆದ ವಿದ್ಯಾರ್ಥಿ ಅಥವಾ ಯುವಜನತೆ ಯೋಗ್ಯ ವಿಚಾರವಂತನಾಗಿದ್ದರೆ ಮಾತ್ರ ನಮ್ಮ ಕಡೆಯಿಂದ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹನಾಗಿರುತ್ತಾನೆ.

ಉದಾ:- ಗ್ರಾಮ ಪಂಚಾಯತ್ ಹಾಗು ಪಟ್ಟಣ ಪಂಚಾಯತ್ (ಪುರಸಭೆ/ನಗರಸಭೆ ಒಳಗೊಂಡಂತೆ) ಚುನಾವಣೆಗೆ 21ವರ್ಷದಿಂದ 45ವರ್ಷ ವಯಸ್ಸಿನ, ವಿಧಾನ ಸಭಾ ಹಾಗು ಲೋಕಸಭಾ ಚುನಾವಣೆಗೆ 25ವರ್ಷದಿಂದ 50ವರ್ಷ ವಯಸ್ಸಿನೊಳಗಿನ ಯೋಗ್ಯ ವಿದ್ಯಾರ್ಥಿ ಹಾಗು ಯುವ ಅಭ್ಯರ್ಥಿಗಳನ್ನು ಸ್ಪರ್ಧಿಸಲು ಅವಕಾಶ ನೀಡುವುದು.

ಹಾಗೆಯೇ ನಮ್ಮ ದೇಶದಲ್ಲಿ ವಿಧಾನ ಪರಿಷತ್ ಹಾಗು ರಾಜ್ಯಸಭಾ ಸದಸ್ಯರಿಗಾಗಿ ನಡೆಯುವ ಚುನಾವಣೆಗಳು ಹಾಗು ನೇಮಕಗಳು ಕೇವಲ ಜನರ ತೆರಿಗೆ ಹಣ ಪೋಲು ಮಾಡಲು ನಾಮಕಾವಸ್ತೆಗೆ ಇರುವ ವ್ಯವಸ್ಥೆ ಎನ್ನುವುದು ನನ್ನ ಅಭಿಪ್ರಾಯ. ದೇಶ ಹಾಗು ರಾಜ್ಯಗಳ ಸಮಗ್ರ ಅಭಿವೃದ್ಧಿಗೆ ಕೇವಲ ಗ್ರಾಮ ಪಂಚಾಯತ್, ಪಟ್ಟಣ ಪಂಚಾಯತ್ (ಪುರಸಭೆ/ನಗರಸಭೆ ಅಗತ್ಯವಿಲ್ಲ), ವಿಧಾನ ಸಭೆ ಮತ್ತು ಲೋಕ ಸಭಾ ಚುನಾವಣೆಗಳು ಮಾತ್ರ ಸಾಕಾಗುತ್ತವೆ. ಉಳಿದೆಲ್ಲವೂ ಕೂಡ ದೇಶದ ಜನರನ್ನು ಪದೇ-ಪದೇ ತೊಂದರೆಗೀಡು ಮಾಡಿ ಭ್ರಷ್ಟ ರಾಜಕೀಯ ಪಕ್ಷಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ಬಳಸುವ ದಾರಿಯಾಗಿದೆ ಎಂದರೂ ತಪ್ಪಾಗಲಾರದು.!

ನಮ್ಮ ಕನಸಿನ ವಿದ್ಯಾರ್ಥಿ ಯುವಜನತೆಯ ಸರ್ಕಾರ ಆಡಳಿತ ವ್ಯವಸ್ಥೆಯಲ್ಲಿದ್ದರೆ ಕೆಳಗಿನ ವಿಷಯಗಳು ಯಾವ ರೀತಿಯಾಗಿ ಪಾರದರ್ಶಕವಾಗಿ ಕಾರ್ಯ ನಿರ್ವಹಿಸುತ್ತವೆ ಎನ್ನುವುದನ್ನು ಪ್ರತೀ ಸಂಚಿಕೆಯಲ್ಲಿ ವಿಶ್ಲೇಷಣೆ ಮಾಡಿ ಪ್ರಕಟಿಸುತ್ತೇವೆ. ಅವುಗಳೆಂದರೆ- ಶಿಕ್ಷಣ, ಉದ್ಯೋಗ, ಆರೋಗ್ಯ ಹಾಗು ಸರಕಾರಿ ಆಸ್ಪತ್ರೆ, ಬಜೆಟ್, ಸಾಮಾಜಿಕ ಬೆಳವಣಿಗೆ, ಸಾರಿಗೆ ಮತ್ತು ರಸ್ತೆಕಾಮಗಾರಿ, ಅಪಘಾತಗಳು, ಅರಣ್ಯ, ಗಣಿಗಾರಿಕೆ, ಕೃಷಿ ಹಾಗು ರೈತ ಮತ್ತು ಗೋ ರಕ್ಷಣೆ, ಗ್ರಾಮ ಪಂಚಾಯತ್ ಹಾಗು ಗ್ರಾಮಾಡಳಿತ ಕಚೇರಿ(ವಿ.ಎ.), ನೀರಾವರಿ, ಭಿಕ್ಷುಕರು ಹಾಗು ತ್ರಿಲಿಂಗಿ(ಹಿಜಿಡಾ), ಕ್ರೀಡೆ, ಪಶು ಆಸ್ಪತ್ರೆ ಹಾಗು ಇನ್ನಿತರ ಪ್ರಮುಖ ವಿಷಯಗಳು.

ಮೇಲಿನ ವಿಷಯಗಳ ಕುರಿತು ಪತ್ರಿಕೆಯಲ್ಲಿ ಪ್ರಕಟವಾದ ನಂತರ ಓದಿದ ನೀವು ಕೂಡ ಆ ವಿಷಯಗಳಲ್ಲದೇ ಬೇರೆ ಸಾಮಾಜಿಕ ವಿಷಯಗಳ ಕುರಿತು ನಿಮ್ಮ ಅಭಿಪ್ರಾಯ, ಅನಿಸಿಕೆ, ಕನಸುಗಳನ್ನು ಹಂಚಿಕೊಳ್ಳಬಹುದು. ಅದು ಯೋಗ್ಯವಾಗಿದ್ದರೆ ನಾವು ಅದನ್ನು ಪತ್ರಿಕೆಯಲ್ಲಿ ಪ್ರಕಟಿಸುತ್ತೇವೆ.

**ಮುಂದುವರಿಯುವುದು..**

## ಸಂಪಾದಕರ ನುಡಿ

**"ಸ್ವಾತಂತ್ರ್ಯಕ್ಕೆ ಮೊದಲು ವಿದೇಶಿಗರಿಗೆ ದೇಶದ ಸಂಪತ್ತನ್ನು ಲೂಟಲು ಕೆಲ ರಾಜರು ಸಹಕರಿಸಿದರೆ, ನಂತರ ಕಂಪೆನಿಗಳಿಗೆ ದೇಶದ ಸಂಪತ್ತನ್ನು ಲೂಟಲು ರಾಜಕಾರಣಿಗಳು ಸಹಕರಿಸಲು ಆರಂಭಿಸಿದರು. ಅಂದು ರಾಜರು ಮಾಡಿದ್ದು ಮೋಸ, ವಂಚನೆಯಾದರೆ ಇಂದು ರಾಜಕಾರಣಿಗಳು ಮಾಡುತ್ತಿರುವುದೇನು".? –ಮತ**

# ಕಲಾ ಕ್ಷೇತ್ರದ ಸಾಧಕರು



ನಾವು ಜೀವನದಲ್ಲಿ ಕಲೆ ಹಾಗು ಸಾಹಿತ್ಯ ಯಾವುದಾದರೊಂದು ಚಟುವಟಿಕೆ ಯಲ್ಲಿ ತೊಡಗಿಕೊಂಡರೆ ಉತ್ತಮ. ಹಾಗಂತ ಯಾವುದು ಕೂಡ ಪ್ರಯತ್ನ ಪಡದೇ ಸಿಗದು ಹಾಗೆಯೇ ಪ್ರಯತ್ನಕ್ಕೆ ತಕ್ಕಂತೆ ಅವಕಾಶ ಸಿಕ್ಕರೆ ಮಾತ್ರ ಯಶಸ್ವಿಯಾಗಲು ಸಾಧ್ಯ. ಪ್ರತಿಯೊಬ್ಬರಲ್ಲೂ ಏನಾದರೊಂದು ಪ್ರತಿಭೆ ಇರುತ್ತದೆ ಆದರೆ ಅದನ್ನು ಯಾರಿಗೆ ತಮ್ಮಲ್ಲಿಯೇ ಗುರುತಿಸಿಕೊಳ್ಳಲು ಸಾಧ್ಯವೋ ಅವರು ಮಾತ್ರ ಸಾಧಿಸಲು ಸಾಧ್ಯ. ಯಾರು ತಮ್ಮಲ್ಲಿರುವ ಕಲೆಯನ್ನು ಗುರುತಿಸಿಕೊಂಡು ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಂಡಾಗ ಅದರಲ್ಲಿಯೇ ಜೀವನ ಕಟ್ಟಿಕೊಳ್ಳಲು ಸಾಧ್ಯ.

ಕಲೆಯು ನೃತ್ಯ, ಸಂಗೀತ, ಚಿತ್ರಕಲೆ, ಶಿಲ್ಪಕಲೆ, ಸಾಹಿತ್ಯವನ್ನು ಒಳಗೊಂಡಿದೆ. ಕಲೆಯು ಮನುಷ್ಯನ ಕಲ್ಪನಾಶಕ್ತಿಯನ್ನು ಹಾಗು ದೈಹಿಕವಾಗಿ ಭಾವನೆಗಳನ್ನು ಅಭಿವ್ಯಕ್ತಪಡಿಸಲು ವೇದಿಕೆಯಾಗಿದೆ ಎಂದರೂ ತಪ್ಪಾಗಲಾರದು. ಎಷ್ಟೋ ಜನ ತಮಗಿರುವ ಕಲಾ ಪ್ರತಿಭೆಯಿಂದ ತಮ್ಮ ಮನಸ್ಸಿಗೆ ಶಾಂತಿ, ನೆಮ್ಮದಿಯನ್ನು ತಂದುಕೊಳ್ಳುತ್ತಾರೆ. ಕೆಲವರು ತಮ್ಮ ಕಲಾ ಪ್ರತಿಭೆಯನ್ನು ಸಾಧಿಸಿ ಅದರಲ್ಲೇ ಜೀವನ ಕಟ್ಟಿಕೊಂಡಿದ್ದಾರೆ.

## ವಿದುಷಿ ದೀಕ್ಷಾ ವಿ.:



ದೀಕ್ಷಾರವರು ಭರತನಾಟ್ಯ ಕಲಾವಿದೆ. ಇವರು ನಮ್ಮ ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ಆರೂರು ಗ್ರಾಮದಲ್ಲಿ ಜನಿಸಿ ತಮ್ಮ ಊರನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡ ನೃತ್ಯ ಸಾಧಕರು. ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ಇವರು ತಮ್ಮ ಪ್ರಾಥಮಿಕ ಹಾಗು ಪ್ರೌಢ ಶಿಕ್ಷಣವನ್ನು ಲಿಟಲ್ ರಾಕ್ ಇಂಡಿಯನ್ ಸ್ಕೂಲ್ ಚಾಂತಾರು–ಬ್ರಹ್ಮಾವರ, ಪದವಿಪೂರ್ವ ಶಿಕ್ಷಣವನ್ನು ಅಮೃತ ಭಾರತಿ ಕಾಲೇಜು ಹೆಬ್ರಿ ಹಾಗು ಪದವಿಯನ್ನು ಮಹಿಳಾ ಕಾಲೇಜು ಅಜ್ಜರ ಕಾಡು ಉಡುಪಿಯಲ್ಲಿ ಪಡೆದಿದ್ದಾರೆ. ಪ್ರಸ್ತುತ ಟಿ.ಎಮ್.ಎ.ಪೈ. ಕಾಲೇಜಿನಲ್ಲಿ ಬಿ.ಎಡ್. ಅಧ್ಯಯನ ಮಾಡುತ್ತಿದ್ದಾರೆ.

ದೀಕ್ಷಾರವರು ಬಾಲ್ಯದಲ್ಲಿಯೇ ತನ್ನ ಮನೆಯವರ ಕನಸಿನಂತೆ ನೃತ್ಯ ತರಬೇತಿ ಪಡೆಯಲು ಆರಂಭಿಸಿದ್ದರು. ಅವರು ನೃತ್ಯ ಕಲೆಗೆ ತೋರಿಸಿದ ಆಸಕ್ತಿ, ಶ್ರದ್ಧೆ, ಹಾಕಿದ ಪರಿಶ್ರಮ ಅವರಿಗೆ "ಗೋಲ್ಡನ್ ಬುಕ್ ಆಫ್ ರೆಕಾರ್ಡ್‌ನಲ್ಲಿ" ವಿಶ್ವದಾಖಲೆ ಪಟ್ಟವನ್ನು ತಮ್ಮ ಮುಡಿಗೇರಿಸಿಕೊಳ್ಳಲು ಸಹಕರಿಸಿತು ಹಾಗು ಅವರ ಈ ಸಾಧನೆಗೆ "ನವರಸ ದೀಕ್ಷಾ ವೈಭವಂ" ಎಂದು ಬಿರುದು ನೀಡಲಾಗಿದೆ. ಅವರು 2025ರ ಆಗಸ್ಟ್ 21 ರಿಂದ ಆಗಸ್ಟ್ 30 ರವರೆಗೆ ಸತತ 9 ದಿನಗಳ 216 ಗಂಟೆ ನೃತ್ಯ ಪ್ರದರ್ಶನ ಕೈಗೊಂಡಿದ್ದರು. ಈ ದಾಖಲೆ ಮಾಡಲು ಇರುವ ನಿಯಮವೆಂದರೆ ಪ್ರತೀ 1 ಗಂಟೆಗೊಮ್ಮೆ 5 ನಿಮಿಷ ಅಥವಾ ಪ್ರತೀ 3 ಗಂಟೆಗೊಮ್ಮೆ 15 ನಿಮಿಷ ವಿಶ್ರಾಂತಿ ಪಡೆಯಲು ಮಾತ್ರ ಅವಕಾಶವಿರುತ್ತದೆ.

ಒಬ್ಬ ಸಾಮಾನ್ಯ ಮನುಷ್ಯನಿಗೆ ದಿನದ 24 ಗಂಟೆಯಲ್ಲಿ ಏನೂ ಮಾಡದೇ ಸುಮ್ಮನೆ ಕೂರಲು, ಮಲಗಲು, ನಡೆದಾಡಲು ಅಥವಾ ನಿಲ್ಲುವುದು ಕಷ್ಟ. ಅಂತದ್ದರಲ್ಲಿ ದೀಕ್ಷಾರವರು ಸತತ 216 ಗಂಟೆಗಳ ಕಾಲ ನಿದ್ರಿಸದೆ ವಿವಿಧ ಬಗೆಯ ನೃತ್ಯ ಪ್ರದರ್ಶನ ಮಾಡಿರುವುದು ನಿಜವಾಗಿಯೂ ಅಸಾಮಾನ್ಯವೇ ಸರಿ. ಇವರಿಗಿಂತ ಮೊದಲು ಮಂಗಳೂರಿನ ಸೈಂಟ್ ಅಲೋಶಿಯಸ್ ಪದವಿ ಕಾಲೇಜಿನ ವಿದ್ಯಾರ್ಥಿನಿ ರೆಮೊನಾ ಪಿರೇರಾ 2025ರ ಜುಲೈನಲ್ಲಿ ಸತತ 170 ಗಂಟೆಗಳ ಕಾಲ ನೃತ್ಯ ಮಾಡಿ "ಗೋಲ್ಡನ್ ಬುಕ್ ಆಫ್ ರೆಕಾರ್ಡ್‌ನಲ್ಲಿ" ವಿಶ್ವದಾಖಲೆ ನಿರ್ಮಿಸಿದ್ದರು. ಅವರ ಸಾಧನೆ ಜಗಜ್ಜಾಹೀರಾಗುವ ಮೊದಲೇ "ದಾಖಲೆಗಳು ಇರುವುದೇ ಮುರಿಯಲು" ಎನ್ನುವಂತೆ ದೀಕ್ಷಾರವರು ಅದನ್ನು ಕೇವಲ ಒಂದು ತಿಂಗಳೊಳಗೆ ಮುರಿದು ದಾಖಲೆಯನ್ನು ತಮ್ಮ ಹೆಸರಿಗೆ ಸೇರಿಸಿಕೊಂಡರು.

ದೀಕ್ಷಾ ವಿ. ಹಾಗು ರೆಮೊನಾ ಪಿರೇರಾ ಇಬ್ಬರೂ ನೃತ್ಯ ಕ್ಷೇತ್ರದ ಮಹಾನ್ ಸಾಧಕರೆ ಆಗಿದ್ದಾರೆ. ಹೀಗಿರುವಾಗ ಇಬ್ಬರ ನಡುವೆ ಹೋಲಿಕೆ ಮಾಡುವುದು ಸರಿಯಲ್ಲ. ಇವರಿಬ್ಬರ ನೃತ್ಯ ವೈಭವವನ್ನು ಅನೇಕರು ಅಭಿನಂದಿಸಿ ಹೊಗಳಿದರೆ ಕೆಲವು ತುಚ್ಛ ಮನಸಿನವರು ಹಳಿದದ್ದು ಉಂಟು. "ಸಾಧಿಸಲಾಗದವನಿಗೆ ಆತನ ಕೊಂಕು ಮಾತುಗಳೇ ಆತನಿಗೆ ಸಮಾಧಾನ ತರುವುದು". ಅಂತವರನ್ನು ನಾವುಗಳು ನಿರ್ಲಕ್ಷಿಸಿ ಮುಂದೆ ಸಾಗುತ್ತಿರಬೇಕು.

ವಿದುಷಿ ದೀಕ್ಷಾ ವಿ. ಅವರು ಭರತನಾಟ್ಯದಲ್ಲಿ ವಿದ್ವತ್ ಪಡೆದಿದ್ದಾರೆ. ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನದಲ್ಲಿ ಸೀನಿಯರ್ ಪದವಿಯನ್ನು ಅಭ್ಯಾಸ ಮಾಡುವುದರ ಜೊತೆಗೆ ವೀಣಾ ವಾದನ, ಚಿತ್ರಕಲೆ, ಯೋಗಾಭ್ಯಾಸ, ಯಕ್ಷಗಾನ ಮತ್ತು ಚಂಡೆ ಹಾಗು ಮದ್ದಲೆ ವಾದನದಲ್ಲಿ ತಮ್ಮ ಹಿಡಿತ ಸಾಧಿಸುತ್ತಿರುವ ಇವರು ಕಲಾ ವಿಭಾಗದಲ್ಲಿ "ಸಕಲ ಕಲಾ ವಲ್ಲಭೆ" ಎನ್ನುವುದನ್ನು ನಿರೂಪಿಸಿದ್ದಾರೆ.

### ಪ್ರಶಸ್ತಿಗಳು:–

ವಿದುಷಿ ದೀಕ್ಷಾ ವಿ. ಅವರು ತಮ್ಮ 23 ವರ್ಷ ವಯಸ್ಸಿನಲ್ಲಿಯೇ ಹಲವಾರು ಕಡೆಗಳಲ್ಲಿ ತಮ್ಮ ಸಾಧನೆಗೆ ವಿವಿಧ ರೀತಿಯ ಪುರಸ್ಕಾರ, ಸನ್ಮಾನ, ಬಹುಮಾನ ಪಡೆದುಕೊಂಡು ಜೀವನವನ್ನು ಪಾವನಗೊಳಿಸಿಕೊಂಡಿದ್ದಾರೆ.

* ಗೋಲ್ಡನ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ವಿಶ್ವದಾಖಲೆ.
* ಇಂಟರ್‌ನ್ಯಾಶನಲ್ ವುಮೆನ್ಸ್ ಅಂಡ್ ಯಂಗ್ ಅಚೀವರ್ಸ್ ಅವಾರ್ಡ್.
* ಗೋಲ್ಡನ್ ಐಕಾನಿಕ್ ಅವಾರ್ಡ್.
* ಕಲಾರ್ಪಣ ಅವಾರ್ಡ್.
* ನಾಟ್ಯರತ್ನ ಬಿರುದು.
* ನೃತ್ಯ ಮಂಜರಿ ಬಿರುದು.

ತನ್ನ ಎಳವೆಯಲ್ಲಿಯೇ ಜನ ಮೆಚ್ಚುವಂತೆ ಸಾಧಿಸಿರುವ ದೀಕ್ಷಾರವರು ಎಲ್ಲಾ ವಿಧ ವಾದ ಕಲೆಗಳ ಅಕಾಡೆಮಿ ಆರಂಭಿಸುವ ಗುರಿ ಹೊಂದಿರುವುದರ ಜೊತೆಗೆ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ಮಕ್ಕಳಿಗೆ ಉಚಿತ ಕಲಾ ತರಬೇತಿ ನೀಡುವ ಮಹತ್ತರವಾದ ಉದ್ದೇಶ ಇಟ್ಟುಕೊಂಡಿದ್ದಾರೆ.

ವಿದುಷಿ ದೀಕ್ಷಾ ವಿ. ಅವರು ಕಾಣುತ್ತಿರುವ ಎಲ್ಲಾ ಕನಸುಗಳು ಮುಂದಿನ ದಿನಗಳಲ್ಲಿ ಯಾವುದೇ ರೀತಿಯ ಅಡಚಣೆಯಾಗದೆ ಈಡೇರಲಿ. ಅವರ ಮುಂದಿನ ಜೀವನ ಉಜ್ವಲವಾಗಿರಲಿ ಹಾಗು ಅವರ ಕಲಾ ಬದುಕು ಹಲವರಿಗೆ ದಾರಿದೀಪವಾಗಲಿ ಎಂದು ಶುಭ ಹಾರೈಸೋಣಾ..

# ಸಾಮಾಜಿಕ ಸಮಸ್ಯೆಗಳು ಹಾಗು ಪರಿಹಾರ

ಪ್ರಜಾಪ್ರಭುತ್ವ ದೇಶದಲ್ಲಿ ಸಾರ್ವಜನಿಕರ ಸಮಸ್ಯೆಗಳ ಪಟ್ಟಿ ಮಾಡಿದರೆ ಅದಕ್ಕೆ ಕೊನೆಯೇ ಇಲ್ಲ. ದೇಶದ ಪ್ರಜೆಗಳು ತಮ್ಮ ಪ್ರಭುತ್ವವನ್ನು ಚುನಾವಣೆಗಳಲ್ಲಿ ಭ್ರಷ್ಟ ರಾಜಕಾರಣಿಗಳಿಗೆ ಪ್ರತೀ ಬಾರಿಯ ವಿವಿಧ ರೀತಿಯ ಚುನಾವಣೆಗಳಲ್ಲಿ ಮಾರಿಕೊಳ್ಳುತ್ತಾರೆ. ಚುನಾವಣೆಯ ನಂತರ ಪ್ರತಿಯೊಂದು ವಿಷಯಕ್ಕೂ ಆಡಳಿತ ವ್ಯವಸ್ಥೆಯಲ್ಲಿರುವ ರಾಜಕಾರಣಿಗಳು ಹಾಗು ಸರ್ಕಾರಿ ಅಧಿಕಾರಿಗಳ ಬಳಿ ಕೆಲಸ ಮಾಡಿಕೊಡುವಂತೆ ಭಿಕ್ಷೆ ಬೇಡಿದ ಹಾಗೆ ಬೇಡುತ್ತಾರೆ.

ಕೇಂದ್ರ ಹಾಗು ರಾಜ್ಯದಲ್ಲಿ ಎರಡು ಪ್ರಬಲ ಪಕ್ಷಗಳು ಆಡಳಿತ ಹಾಗು ವಿರೋಧ ಪಕ್ಷದಲ್ಲಿವೆ. ಆದರೂ ಸಾರ್ವಜನಿಕರ ಕೆಲಸಗಳು ಅಧಿಕಾರಿಗಳು ಕೇಳಿದಷ್ಟು ಲಂಚ ನೀಡಿದರೂ ಆಗುವುದಿಲ್ಲ ಎಂದು ಜನ ಬೊಬ್ಬೆ ಹಾಕುತ್ತಾರೆ. ಸಾವಿರ, ಲಕ್ಷ ಸಂಖ್ಯೆಯಲ್ಲಿ ಬಳಸಲಾಗುವ ಸರ್ಕಾರಿ ಆನ್‌ಲೈನ್ ಆಪ್‌ಗಳು, ವೆಬ್‌ಸೈಟ್‌ಗಳು ದಿನದಲ್ಲಿ ನಾಲ್ಕು ಗಂಟೆ ಕೂಡ ಸರಿಯಾಗಿ ಕೆಲಸ ಮಾಡುವುದಿಲ್ಲ. ಆದರೆ ಕೊಟ್ಯಾಂತರ ಜನ ಬಳಸುವ ಖಾಸಗಿ ಆಪ್‌ಗಳು ದಿನದ ಇಪ್ಪತ್ನಾಲ್ಕು ಗಂಟೆಯು ಕೊಂಚ ಕೂಡ ಅಡಚಣೆಯಿಲ್ಲದೇ ಕಾರ್ಯರೂಪದಲ್ಲಿರುತ್ತವೆ.

ಗ್ರಾಮ ಪಂಚಾಯತ್ ಇಂದ ಹಿಡಿದು ತಾಲೂಕು ಕಚೇರಿ, ಕಂದಾಯ ಇಲಾಖೆ, ತಹಶೀಲ್ದಾರ್ ಕಚೇರಿ, ಎಸಿ ಕಚೇರಿ, ಜಿಲ್ಲಾ ಪಂಚಾಯತ್ ಹಾಗು ಜಿಲ್ಲಾಧಿಕಾರಿ ಕಚೇರಿ ತನಕ ಇರುವ ಹಲವು ವಿವಿಧ ಬಗೆಯ ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಕೆಲಸಗಳು ಸಮಯಕ್ಕೆ ಸರಿಯಾಗಿ ಆಗುತ್ತಿಲ್ಲ.

ಒಬ್ಬ ವ್ಯಕ್ತಿ ತನ್ನ ಸ್ವಂತ ಜಾಗದಲ್ಲಿ ಕಟ್ಟಡ ಕಟ್ಟಲು ಪಡುತ್ತಿರುವ ಕಷ್ಟ ಹೇಳತೀರದು. ಮೊದಲಿಗೆ ಭೂ ಪರಿವರ್ತನೆ, 9 ಅಂಡ್ 11, ಎಂಜಿನಿಯರ್ ಪ್ಲಾನ್, ಸಿಂಗಲ್ ಲೇಔಟ್, ಪ್ರಾಧಿಕಾರ, ಪಿಡಬ್ಲ್ಯುಡಿ ಕಛೇರಿ ಹೀಗೆ ಆತ ಬ್ರೋಕರನ್ನು ಹಿಡಿದು ಹೊರಟರು ಆರರಿಂದ ಒಂದು ವರ್ಷ ಬೇಕು. ಅದೇ ಬ್ರೋಕರ್ ಇಲ್ಲದೇ ಹೊರಟರೆ ಅದು ಅಸಾಧ್ಯ. ಎಷ್ಟೋ ಜನರು ಬ್ರೋಕರ್‌ಗಳಿಂದ ಮೋಸ ಹೋಗಿ ತಮ್ಮ ಕಟ್ಟಡ ಕಟ್ಟುವ ಕನಸನ್ನು ನಿಲ್ಲಿಸುದ್ದು ಉಂಟು. ಇನ್ನು ಹಲವರು ದಾಖಲೆಗಳಿಗೆ ಅಲೆದಾಡಿ ಮನೆ ಕಟ್ಟುವ ಆಸಕ್ತಿಯನ್ನು ಬಿಟ್ಟಿದ್ದು ಉಂಟು. ಎಲ್ಲಿಯ ತನಕ ಈ ವ್ಯವಸ್ಥೆ ಹದಗೆಟ್ಟಿದೆ ಎಂದರೆ ಸರಕಾರವೇ 94ಸಿ ಅಡಿಯಲ್ಲಿ ನೀಡಿದ 9ಸೆಂಟ್ಸ್ ಜಾಗದಲ್ಲಿ ಮನೆಕಟ್ಟಲು ಸರ್ಕಾರವೇ ನೀಡಬೇಕಾಗಿರುವ 9ಅಂಡ್11 ನೀಡಿಕೆ ನಿಲ್ಲಿಸಲಾಗಿ ನಾಲ್ಕೈದು ತಿಂಗಳುಗಳೇ ಆಗಿದೆ.

ಸಾರ್ವಜನಿಕರಿಗೆ ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ಕೂಡ ರಾಜಕಾರಣಿಗಳು ಸದನದಲ್ಲಿ ಚರ್ಚೆ ಮಾಡುವ ವಿಷಯಗಳು ಮಾತ್ರ ನೆಹರು, ಗಾಂಧೀಜಿ, ಸಾವರ್ಕರ್, ಪಟೇಲ್, ಟಿಪ್ಪು ಸುಲ್ತಾನ್, ಪಾಕ್, ಚೀನಾ, ಬಾಂಗ್ಲಾ ಹಾಗು ಇನ್ನಿತರ ನಿಶ್ಪ್ರಯೋಜಕವಾದವುಗಳು. ಇದಕ್ಕೆ ಸರಿಯಾಗಿ ಅಂತಹ ರಾಜಕಾರಣಿಗಳನ್ನು ಪ್ರತೀ ಬಾರಿಯ ಚುನಾವಣೆಯಲ್ಲಿ ಆರಿಸಿ, ಬೆಂಬಲಿಸುವವರು ಕೂಡ ಶಾಲೆಗೆ ಹೋಗಿ ಶಿಕ್ಷಣ ಪಡೆದ ವಿದ್ಯಾವಂತರೇ ಆಗಿರುವುದು ನಮ್ಮ ದೇಶದ ದೊಡ್ಡ ದುರಂತ.

ಸಾರ್ವಜನಿಕ ಸಮಸ್ಯೆಗಳು ಯಾವುದೆಂದು ದೇಶದ ಅನೇಕರಿಗೆ ಏನೆಂದು ತಿಳಿಯದಿರುವುದು ಕೂಡ ಸಮಸ್ಯೆಯೇ ಆಗಿದೆ. ಕಸ ವಿಲೇವಾರಿ, ರಸ್ತೆ ಬದಿಯ ಚರಂಡಿ ಸ್ವಚ್ಛತೆ ಹಾಗು ಕಳೆ ಗಿಡಗಳ ಕಟಾವು, ರಸ್ತೆ ಹೊಂಡ ದುರಸ್ತಿ, ನೀರು ಸರಬರಾಜು, ಕಳಪೆ ಕಾಮಗಾರಿ, ರಾಷ್ಟ್ರೀಯ ಮಟ್ಟದಲ್ಲಾಗುವ ಪರೀಕ್ಷಾ ಪ್ರಶ್ನೆಪತ್ರಿಕೆ ಸೋರಿಕೆ, ಅಕ್ರಮ ಗಣಿಗಾರಿಕೆ, ರೈತರಿಗೆ ಕಳಪೆ ಬೀಜ ಹಾಗು ಕೀಟನಾಶಕ ಹಂಚಿಕೆ, ಎಲ್ಲೆಂದರಲ್ಲಿ ಬ್ಯಾನರ್ ಪೋಸ್ಟರ್ ಅಳವಡಿಕೆ, ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿ ಹಾಗು ವೈದ್ಯರ ಸಮಸ್ಯೆ, ಪ್ರತೀ ಸರ್ಕಾರಿ ಕಚೇರಿಗಳಲ್ಲೂ ಅಕ್ರಮ ಅಥವಾ ಲಂಚವತಾರ, ಖಾಸಗಿಯವರು ರೋಡ್ ಮಾರ್ಜಿನ್‌ಗೆ ಬಿಡುವ ಜಾಗಕ್ಕೆ ಪರಿಹಾರವಿಲ್ಲ, ಕಾಡು ಪ್ರಾಣಿಗಳ ದಾಳಿ ಹಾಗು ಸಂರಕ್ಷಣೆ, ಬೀದಿ ಪ್ರಾಣಿಗಳ ಹಾವಳಿ ಹಾಗು ಬಲಿ ಹಾಗೂ ಇನ್ನೂ ಹಲವಾರು ಇವೆ. ಹಾಗಾಗಿ ಜನರು ತಮ್ಮ ಗಮನಕ್ಕೆ ಬಂದ ಸಾರ್ವಜನಿಕ ಸಮಸ್ಯೆಗಳ ಕುರಿತು ನಮ್ಮ ಪತ್ರಿಕೆಯೊಂದಿಗೆ ಮುಕ್ತವಾಗಿ ಹಂಚಿಕೊಳ್ಳಬಹುದು ಹಾಗೆಯೇ ಅವುಗಳಿಗೆ ತಮ್ಮ ಬಳಿ ಪರಿಹಾರವಿದ್ದರೂ ಕೂಡ ಸೂಚಿಸಬಹುದು.

**ಕವನ**

## ಓ ಗುಲಾಬಿಯೇ



ಓ ಗುಲಾಬಿಯೆ,
ನೀ ಬಾಡುವ ಮುನ್ನ ಮಾಡಿಹೆ ಮಾಯೆ..
ಮೊಗ್ಗರಳಿ ಹೂವಾಗಿ
ಸ್ನೇಹಕ್ಕೂ ನೀ, ಪ್ರೀತಿಗೂ ನೀ.
ಹೂವು ಸರವಾಗಿ
ಸಂತಸಕ್ಕೂ ನೀ, ಸಂಭ್ರಮಕ್ಕೂ ನೀ.
ಓ ಗುಲಾಬಿಯೆ,
ನೀ ಬಾಡುವ ಮುನ್ನ ಮಾಡಿಹೆ ಮಾಯೆ..
ಇರುವ ಒಂದೆರಡು ದಿನ
ಮುಡಿಗೂ ನೀ, ಜೋಡಿಗೂ ನೀ.
ಜಗತೊರೆವ ಮೊದಲು
ಶಾಂತಿಗೂ ನೀ, ಸಂಧಾನಕ್ಕೂ ನೀ.

–ಮತ

**ಸಂಪಾದಕರ ನುಡಿ**

"ಒಂದು ದೇಶದ ಪ್ರಧಾನಿ ತನ್ನದೇ ದೇಶದ ರಾಜ್ಯಗಳ ಚುನಾವಣಾ ಸಮಯದಲ್ಲಿ ಮಾತ್ರ ತೆರಳಿ, ತಾನು ಗೆದ್ದು ಬಂದ ಪಕ್ಷ ಆಯಾ ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದರೆ ಅಭಿವೃದ್ಧಿ ಮಾಡುತ್ತೇನೆ ಎಂದಾಗ, ಆತ ದೇಶದ ಪ್ರಧಾನಿಯೋ ಇಲ್ಲ ಪಕ್ಷದ ಪ್ರಧಾನಿಯೋ ಎನ್ನುವ ಗೊಂದಲ ಮೂಡುವುದಿಲ್ಲವೇ".? –ಮತ

## ಕ್ರೀಡಾ ಕ್ಷೇತ್ರದ ಸಾಧಕರು



ಕ್ರೀಡೆ ಎನ್ನುವುದು ಮಾನವನ ದೈಹಿಕ ಸಾಮರ್ಥ್ಯ ಹಾಗು ಮಾನಸಿಕ ಸ್ಥೈರ್ಯವನ್ನು ಸಾರ್ವಜನಿಕವಾಗಿ ಬಹಿರಂಗಗೊಳಿಸುವ ವೇದಿಕೆ. ಇಲ್ಲಿ ಸ್ಥಳೀಯ ಮಟ್ಟದಿಂದ ಹಿಡಿದು ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಧಿಸಿದವರು ಹಲವರು ಇದ್ದಾರೆ. ನಮ್ಮ ದೇಶದಲ್ಲಿ ಪ್ರತಿಯೊಂದು ಕ್ರೀಡೆಯಲ್ಲೂ ದೇಶವನ್ನು ಪ್ರತಿನಿಧಿಸಿದವರು ಇದ್ದಾರೆ.

### ನವೀನ್ ಶೆಟ್ಟಿ:




ನಮ್ಮ ಪತ್ರಿಕೆಯಲ್ಲಿ ಮೊದಲಿಗೆ ನಮ್ಮ ಸುತ್ತಮುತ್ತಲಿನ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಲು ಬಯಸುತ್ತೇವೆ. ಹಾಗಾಗಿ ಮೊದಲಿಗೆ ಕ್ರಿಕೆಟಿನಲ್ಲಿ ತನ್ನ ಪ್ರತಿಭೆಯನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ತೋರಿದ ನಮ್ಮ ಕರ್ನಾಟಕ ರಾಜ್ಯದ, ಉಡುಪಿ ಜಿಲ್ಲೆಯ, ಬ್ರಹ್ಮಾವರ ತಾಲೂಕಿನ, ನೀಲಾವರ ಗ್ರಾಮದ ಕರ್ಡಾಡಿ ನವೀನ್ ಶೆಟ್ಟಿ. ನೀಳಕಾಯದ ಯುವಕ ಬಾಲ್ಯದಲ್ಲಿ ನಮ್ಮೊಂದಿಗೆ ಕ್ರಿಕೆಟ್ ಆಟದಲ್ಲಿ ತೊಡಗಿಕೊಳ್ಳುತ್ತಿದ್ದರು ಎನ್ನುವುದು ನಮಗೆ ಇಂದು ಖುಷಿ ಕೊಡುವ ವಿಷಯ.

ನವೀನ್ ಶೆಟ್ಟಿಯವರು ಕೃಷಿಮೂಲದ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದವರು. ಅವರ ಜೀವನ ಹೇಳಿಕೊಳ್ಳುವಷ್ಟು ಸುಖಮಯ ವಾಗಿರಲಿಲ್ಲ. ತಮ್ಮ ಪ್ರಾಥಮಿಕ ಶಿಕ್ಷಣವನ್ನು ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ ಯಳ್ಳಂಪಳ್ಳಿ, ಪ್ರೌಢ ಶಿಕ್ಷಣವನ್ನು ಕುಂಜಾಲು ಶಾಲೆಯಲ್ಲಿ, ಪಿಯು ಹಾಗು ಪದವಿಯನ್ನು ಬ್ರಹ್ಮಾವರದ ಎಸ್.ಎಮ್.ಎಸ್. ಕಾಲೇಜಿನಲ್ಲಿ ಮುಗಿಸಿದರು. ಶಾಲಾ-ಕಾಲೇಜು ಸಮಯದಲ್ಲಿಯೇ ಅವರು ಕ್ರಿಕೆಟ್‌ನಲ್ಲಿ ಎಷ್ಟು ಪ್ರತಿಭಾವಂತರಾಗಿದ್ದರು ಎನ್ನುವುದಕ್ಕೆ ಅವರಿಗೆ ದಕ್ಷಿಣಭಾರತದ ಪ್ರತಿಷ್ಠಿತ ವಿದ್ಯಾಸಂಸ್ಥೆಯಾದ ಮೂಡುಬಿದಿರೆಯ ಆಳ್ವಾಸ್‌ನಲ್ಲಿ ಕ್ರೀಡಾಕೋಟಾದ ನೆಲೆಯಲ್ಲಿ ಸ್ನಾತಕೋತ್ತರ ಪದವಿ ಮಾಡುವ ಅವಕಾಶ ಸಿಕ್ಕಿದ್ದೆ ಸಾಕ್ಷಿ.

ಪದವಿ ಹಾಗು ಸ್ನಾತಕೋತ್ತರ ಪದವಿ ಕಲಿಯುವಾಗ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಲೆದರ್ ಬಾಲ್ ಕ್ರಿಕೆಟ್‌ನಲ್ಲಿ ರಾಜ್ಯ ಹಾಗು ರಾಷ್ಟ್ರ ಮಟ್ಟದಲ್ಲಿ ತಮ್ಮನ್ನು ಗುರುತಿಸಿಕೊಂಡವರು. ಹಾಗೆಯೇ ಟೆನಿಸ್ ಬಾಲ್ ಕ್ರಿಕೆಟ್‌ನಲ್ಲೂ ಕೂಡ ಉತ್ತಮ ಆಲ್‌ರೌಂಡರ್ ಆಟವನ್ನು ಪ್ರದರ್ಶಿಸಿದ ಯುವಕ.

ಕೇವಲ ಕ್ರೀಡೆಯಿಂದ ಜೀವನ ಸಾಗಿಸಲು ಸಾಧ್ಯವಿಲ್ಲ ಎಂದರಿತಿದ್ದ ನವೀನ್‌ರವರು ತಮ್ಮ ಸ್ನಾತಕೋತ್ತರ ಪದವಿ ಮುಗಿದ ನಂತರ ರಾಜ್ಯದ ವಿವಿಧ ಖಾಸಗಿ ಕಂಪೆನಿಗಳಲ್ಲಿ ಕೆಲಸ ಮಾಡಿದ್ದರು. ಹಾಗೆಯೇ ಅವಕಾಶ ಸಿಕ್ಕಾಗಲೆಲ್ಲಾ ತಮ್ಮ ಕ್ರೀಡಾ ಪ್ರತಿಭೆಯನ್ನು ಪ್ರದರ್ಶಿಸುತ್ತಿದ್ದರು. ಹೀಗಿರುವಾಗ ಅವರಿಗೆ ವಿದೇಶದ ಖಾಸಗಿ ಬ್ಯಾಂಕಿಂಗ್ ಕಂಪೆನಿಯಲ್ಲಿ ಕೆಲಸ ಮಾಡುವ ಅವಕಾಶ ಬಂದಿತ್ತು. ಸಿಕ್ಕ ಅವಕಾಶವನ್ನು ಅವರು ಭರಪೂರವಾಗಿ ಬಳಸಿಕೊಂಡರು.

ನವೀನ್ ಶೆಟ್ಟಿಯವರು ಬಹರಿನ್‌ನಲ್ಲಿ ದುಡಿಯುತ್ತಾ ಅಲ್ಲಿನ "ಸಾಚಿ" ಲೆದರ್ ಬಾಲ್ ಕ್ರಿಕೆಟ್ ಕ್ಲಬ್‌ನ ಮೆಂಬರ್ ಆಗಿ ಕ್ರಿಕೆಟ್ ಆಡುತ್ತಾ ಬರುತ್ತಿದ್ದಾರೆ. ಇತ್ತೀಚಿನ ದಿನದಲ್ಲಿ ಅವರು ಬಹರಿನ್‌ನ ರಾಷ್ಟ್ರೀಯ ಕ್ರಿಕೆಟ್ ತಂಡಕ್ಕೆ ಆಯ್ಕೆಗೊಂಡು ಅದರ ಮೂಲಕ ಅಂತರಾಷ್ಟ್ರೀಯ ಮಟ್ಟದಲ್ಲಿ ತನ್ನನ್ನು ತೊಡಗಿಸಿಕೊಳ್ಳುವುದಲ್ಲದೇ ಸವ್ಯಸಾಚಿ ಆಟಗಾರನಾಗಿ ಉತ್ತಮ ಪ್ರದರ್ಶನ ನೀಡಿ ತಂಡ "ಚಾಂಪಿಯನ್" ಆಗುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಇದು ನಮ್ಮೂರಿನ ಹುಡುಗನ ಸಾಧನೆ ಎನ್ನುವುದಕ್ಕೆ ನಮಗೆ ಹೆಮ್ಮೆಯಾಗುತ್ತದೆ. ಶ್ರೀಯುತ ನವೀನ್ ಶೆಟ್ಟಿಯವರು ಕ್ರೀಡೆಯಲ್ಲಿ ಇನ್ನೂ ಅನೇಕ ಇತಿಹಾಸ ಸೃಷ್ಟಿಸುವಂತಹ ಆಟಗಾರನಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಧಿಸಲಿ ಎಂದು ಶುಭ ಹಾರೈಸೋಣ.

## ವಿವಿಧ ಕ್ಷೇತ್ರದ ಸಾಧಕರ ಪರಿಚಯದ ಉದ್ದೇಶ

ಈ ಭೂಮಿ ಮೇಲೆ ಹುಟ್ಟಿದ ಪ್ರತಿಯೊಬ್ಬರಲ್ಲೂ ಒಂದಲ್ಲ ಒಂದು ಪ್ರತಿಭೆ ಇರುತ್ತದೆ. ಆದರೆ ಆ ಪ್ರತಿಭೆಯನ್ನು ಗುರುತಿಸಿಕೊಂಡು ಅದನ್ನು ಸಾಧನೆಯೆಡೆಗೆ ಸಾಗಿಸಿಕೊಳ್ಳಲು ಎಲ್ಲರಿಗೂ ಸಾಧ್ಯವಾಗುವುದಿಲ್ಲ, ಹಾಗೆಯೇ ಅನೇಕರಿಗೆ ಅವಕಾಶ ಕೂಡ ಸಿಗದಿರಬಹುದು.

ಆದರೆ ಅವಕಾಶ ಸಿಕ್ಕಾಗ ಯಾರು ಅದನ್ನು ಸರಿಯಾಗಿ ಬಳಸಿಕೊಂಡು ಯಶಸ್ವಿಯಾಗುತ್ತಾರೋ ಅವರು ಸಾಧಕರಾಗುತ್ತಾರೆ ಎನ್ನಬಹುದು. ಆರ್ಥಿಕವಾಗಿ ಹಿಂದುಳಿದ ಕುಟುಂಬ ಅಥವಾ ಹಳ್ಳಿಯ ಯಾವುದೋ ಮೂಲೆಯಿಂದ ಕಠಿಣ ಸವಾಲುಗಳನ್ನು ಎದುರಿಸಿ ತಮ್ಮ ಪ್ರತಿಭೆಯನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಲು ಹೋರಾಡುವ ವ್ಯಕ್ತಿಗಳ ಸಾಧನೆ ಯಾವಾಗಲೂ ಶ್ರೇಷ್ಠ ಹಾಗು ಸ್ಫೂರ್ತಿದಾಯಕವಾದುದು.!

ಹಾಗಾಗಿ ವಿದ್ಯಾರ್ಥಿಗಳು ಹಾಗು ಪತ್ರಿಕೆಯ ಚಂದಾದಾರರು ತಮ್ಮ ಸುತ್ತಮುತ್ತಲಿನಲ್ಲಿ ಕೃಷಿ, ಕಲೆ, ಸಾಹಿತ್ಯ, ಕ್ರೀಡೆ, ಶಿಕ್ಷಣ, ಉದ್ಯೋಗ, ವ್ಯವಹಾರ, ವಿಜ್ಞಾನ ಹಾಗು ಇನ್ನಿತರ ಯಾವುದೇ ರೀತಿಯ ಸಾರ್ವಜನಿಕ ಕ್ಷೇತ್ರದಲ್ಲಿ ಸಾಧನೆಗೈದವರ ಬಗ್ಗೆ ನಮಗೆ ಯಾವಾಗ ಬೇಕಾದರು ಬರೆದು ಕಳುಹಿಸಬಹುದು. ನಾವು ಅದನ್ನು ಪರಿಶೀಲಿಸಿ ಪ್ರಕಟಿಸುತ್ತೇವೆ. ಇದರಿಂದಾಗಿ ನಿಮ್ಮ ಸುತ್ತಮುತ್ತಲಿನ ಪ್ರತಿಭೆಗಳನ್ನು ಸಾರ್ವಜನಿಕವಾಗಿ ಗುರಿತಿಸಿ ಗೌರವಿಸಿದಂತಾಗುತ್ತದೆ ಹಾಗು ಸಾಧನೆಗಳು ಇತರರಿಗೆ ಸಾಧಿಸಲು ಸ್ಫೂರ್ತಿಯಾಗುತ್ತವೆ.

## ದುಶ್ಚಟಗಳ ದಾಸರಾಗದಿರಿ, ದೂರವಿರಿ



ಆಧುನಿಕ ಜೀವನ ಶೈಲಿಯ ನೆಪದಲ್ಲಿ ಇಂದು ವಿದ್ಯಾರ್ಥಿಗಳು ಅನೇಕ ಕೆಟ್ಟ ಅಭ್ಯಾಸಗಳನ್ನು ರೂಢಿಸಿಕೊಂಡಿರುತ್ತಾರೆ. ಇಂತಹ ಕೆಟ್ಟ ಅಭ್ಯಾಸಗಳು ದುಶ್ಚಟಗಳಾಗಿ ಪರಿವರ್ತನೆಗೊಂಡು ಗಂಭೀರವಾದ ಆರೋಗ್ಯ ಸಮಸ್ಯೆಗಳನ್ನು ಹಾಗೂ ಹಣ ಕಾಸಿನ ತೊಂದರೆಯನ್ನು ತಂದೊಡ್ಡುತ್ತವೆ.

ವಿದ್ಯಾರ್ಥಿಗಳೇ, ದುಶ್ಚಟವೆಂದರೆ ಕೇವಲ ಮದ್ಯಪಾನ, ಧೂಮಪಾನ ತಂಬಾಕು ಸೇವನೆಗಳೆಂದಲ್ಲ. ಇವೆಲ್ಲವೂ ನಿಮ್ಮ ಆರೋಗ್ಯದ ಮೇಲೆ ಪ್ರಭಾವ ಮತ್ತು ಪರಿಣಾಮ ಬೀರುವು ದಾದರೆ, ಇನ್ನು ಕೆಲವು ದುಶ್ಚಟಗಳಾದ ಅತಿಯಾದ ಆತುರತೆ, ದುರಾಸೆ, ಕ್ರೋಧ, ಮದ, ಮತ್ಸರ, ಆಲಸಿತನ, ಸುಳ್ಳು ಹೇಳುವುದು, ಅತಿಯಾದ ಮೊಬೈಲ್ ಬಳಕೆ ಇತ್ಯಾದಿಗಳು ಮನುಷ್ಯನ ಮಾನಸಿಕ ಹಾಗೂ ಆಂತರಿಕ ಬೆಳವಣಿಗೆಯ ಮೇಲೆ ಪ್ರಭಾವ ಬೀರುತ್ತದೆ.

ಕೆಲವೊಮ್ಮೆ ನಾವು ದುಶ್ಚಟಗಳ ಕಡೆಗೆ ಗೊತ್ತಿದ್ದೋ, ಗೊತ್ತಿಲ್ಲದೆಯೋ, ಕ್ಷಣಿಕ ಸುಖ ಮತ್ತು ಸಂತೋಷಕ್ಕಾಗಿ ಅದರ ಕಡೆ ವಾಲುತ್ತೇವೆ. ದುಶ್ಚಟಗಳನ್ನು ಕಲಿಯುವುದು ಸುಲಭ, ಆದರೆ ಅದರಿಂದ ಹೊರಗೆ ಬರುವುದು ಕಷ್ಟಸಾಧ್ಯ.

ಕೆಲವೊಂದು ದುರಭ್ಯಾಸಗಳನ್ನು ನಾವು ಅಲ್ಪಕಾಲದ ಮೋಜಿಗೆಂದು ಪ್ರಾರಂಭಿಸುತ್ತೇವೆ. ಮೊದಮೊದಲಿಗೆ ಅವುಗಳು ನಮಗೆ ಸಂತೋಷವನ್ನು ನೀಡಿದರೂ, ಕಾಲಕ್ರಮೇಣವಾಗಿ ಅವು ನಮ್ಮ ಜೀವನವನ್ನೇ ಆವರಿಸಿಕೊಂಡು ಬಿಡುತ್ತವೆ. ನಮ್ಮ ಬದುಕು ದುಶ್ಚಟಗಳಿಂದ ಹಾಳಾಗುತ್ತಿದೆ ಎಂದು ತಿಳಿಯುವಾಗ ಅದರಿಂದ ಹೊರಬರಲು ಸಾಧ್ಯವಾಗದೇ ಹೋಗ ಬಹುದು. ಇದರಿಂದ ಮನುಷ್ಯನು ಸಮಾಜದಲ್ಲಿ ಸ್ಥಾನ-ಮಾನ, ಸಂಸಾರದಲ್ಲಿ ಸುಖ-ಶಾಂತಿ, ನೆಮ್ಮದಿ ಎಲ್ಲವನ್ನೂ ಕಳೆದುಕೊಳ್ಳುತ್ತಾನೆ. ದುಡಿದ ಹಣವನ್ನೆಲ್ಲ ದುಶ್ಚಟಗಳಿಗೆ ವ್ಯಯಿಸಿ, ಜೀವನದಲ್ಲಿ ಸುಖ-ಶಾಂತಿಯನ್ನಲ್ಲದೇ ಆರೋಗ್ಯವನ್ನು ಸಹ ಕಳೆದುಕೊಳ್ಳುವುದು ಎಷ್ಟರ ಮಟ್ಟಿಗೆ ಸರಿ ಎಂದು ನೀವೇ ಯೋಚಿಸಿ.

ದುಶ್ಚಟಗಳಿಂದ ಮುಕ್ತಿ ಹೊಂದಲು ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳಿ, ನಿಮ್ಮನ್ನು ಸದಾ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ, ಕಥೆ, ಕಾದಂಬರಿ, ಹಾಸ್ಯ, ಕವನ ಮೊದಲಾದವುಗಳನ್ನು ಓದುವ ಹವ್ಯಾಸದೊಂದಿಗೆ ಬರೆಯುವುದನ್ನು ಸಹ ರೂಢಿಸಿಕೊಳ್ಳಿ, ಯೋಗ ಹಾಗೂ ಧ್ಯಾನವನ್ನು ಮಾಡುವುದರಿಂದ ನಮ್ಮ ದೇಹ ಮತ್ತು ಮನಸ್ಸಿನ ಮೇಲೆ ಹಿಡಿತ ಸಾಧಿಸಬಹುದು. ಪರಿವಾರ ದೊಂದಿಗೆ ಸಮಯ ಕಳೆಯುವುದು, ಪ್ರಯಾಣ, ಚಿತ್ರ ಬಿಡಿಸುವುದು, ಹೀಗೆ ಹಲವಾರು ಹವ್ಯಾಸಗಳು ನಿಮ್ಮನ್ನು ಕ್ರಿಯಾಶೀಲರಾಗಿರಲು ಸಹಾಯ ಮಾಡುತ್ತವೆ.

**ಶ್ರೀಮತಿ ವನಿತ ಶೆಟ್ಟಿ**
ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯ ವಿಭಾಗ,
ಎಸ್. ಎಮ್. ಎಸ್ ಕಾಲೇಜು, ಬ್ರಹ್ಮಾವರ

## ಮಾಸಿಕ ಪ್ರಬಂಧ ಸ್ಪರ್ಧೆ

ನಮ್ಮ ಪತ್ರಿಕಾ ಮಾಧ್ಯಮ ಪ್ರತೀ ಸಂಚಿಕೆಗೂ ಒಂದು ವಿಷಯ ಕೊಟ್ಟು ಅದರ ಕುರಿತು ವಿದ್ಯಾರ್ಥಿಗಳು ಹಾಗು ಚಂದಾದಾರರಿಗೆ ಎ4 ಶೀಟ್‌ನ 4ಪುಟ ಮೀರದಂತೆ ಪ್ರಬಂಧ ಬರೆಯಲು ಅವಕಾಶ ನೀಡಲಿದೆ. ಈ "ಮಾಸಿಕ ಪ್ರಬಂಧ ಸ್ಪರ್ಧೆ" ಮೂರು ವಿಭಾಗದಲ್ಲಿ ನಡೆಯುತ್ತದೆ. ದ್ವಿತೀಯ ಪಿಯು ಹಾಗು ಪಿಯು ಮೊದಲು, ಪದವಿ ಹಾಗು ಪದವಿ ನಂತರ ಮತ್ತು ಸಾರ್ವಜನಿಕರ (ಚಂದಾದಾರರು) ವಿಭಾಗ. ಇಲ್ಲಿ ಒಂದೇ ವಿಷಯದ ವಿವಿಧ ಆಯಾಮಗಳನ್ನು ನೀಡಲಾಗುತ್ತದೆ ಆದರೆ ಸ್ಪರ್ಧೆ ಬೇರೆ ಬೇರೆಯಾಗಿರುತ್ತದೆ. ಪ್ರಬಂಧವನ್ನು ಪತ್ರಿಕಾ ವೆಬ್‌ಸೈಟಿನಲ್ಲಿ ಕೊಟ್ಟಿರುವ ಆಯ್ಕೆಯಲ್ಲೇ ಅಪ್‌ಲೋಡ್ ಮಾಡಬೇಕು. ಪ್ರತೀ ವಿಭಾಗದಲ್ಲೂ ಮೊದಲು ಬಂದ 10 ಲೇಖನಗಳನ್ನು ಮಾತ್ರ ನಮ್ಮ ವೆಬ್‌ಸೈಟ್ ಸ್ವೀಕರಿಸುತ್ತದೆ.

ಉತ್ತಮವಾದ 3 ಲೇಖನಗಳಿಗೆ (1+1+1 ಪ್ರತೀ ವಿಭಾಗದಲ್ಲಿ ಒಂದರಂತೆ) "ಪ್ರಶಂಸನಾ ಪತ್ರ" ಜೊತೆಗೆ "ಶಾಶ್ವತ ಫಲಕ" ನೀಡಲಾಗುತ್ತದೆ. ಲೇಖನವನ್ನು ಟೈಪ್ ಮಾಡಿ ಪಿಡಿಎಫ್ ಅಪ್‌ಲೋಡ್ ಮಾಡಬಹುದು ಅಥವಾ ಪೇಪರಿನಲ್ಲಿ ಬರೆದು ಮೊಬೈಲ್ ಅಲ್ಲಿ ಫೋಟೋ ತೆಗೆದು ಇಲ್ಲವೇ ಪ್ರಿಂಟರ್ ಅಲ್ಲಿ ಸ್ಕ್ಯಾನ್ ಮಾಡಿ ಪಿಡಿಎಫ್ ಅಪ್‌ಲೋಡ್ ಮಾಡಬೇಕು. ಬರವಣಿಗೆ ಗೀಚುಮಾಡದೆ ಸ್ವಚ್ಛವಾದ ಕೈಬರಹ ಅಥವ ಟೈಪಿಂಗ್‌ನಲ್ಲಿ ಇರಬೇಕು. "ಪ್ರಶಂಸನಾ ಪತ್ರ" ಹಾಗು "ಶಾಶ್ವತ ಫಲಕ"ವನ್ನು ನೇರವಾಗಿ ತಲುಪಿಸಲಾಗುವುದು, ದೂರದವರಿಗೆ ಕೊರಿಯರ್ ಮಾಡಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸಲು ಪತ್ರಿಕಾ ವೆಬ್‌ಸೈಟಿನಲ್ಲಿ ನೋಂದಾಯಿಸಿಕೊಂಡವರಿಗೆ ಮಾತ್ರ ಅವಕಾಶವಿರುತ್ತದೆ.

### ಮೊದಲ ಮಾಸಿಕ ಪ್ರಬಂಧ ವಿಷಯ: "ಸಮಾಜ"

ನಮ್ಮ ಸುತ್ತಮುತ್ತಲಿನ ಸಾರ್ವಜನಿಕ ಪರಿಸರವೇ ಸಮಾಜ. ನಾವು ನಮ್ಮ ಖಾಸಗಿ ಜಾಗ ಹಾಗು ಬದುಕಿನಿಂದ ಹೊರಬಂದೆವು ಅಂದರೆ ಅದೇ ಸಮಾಜ. ನಾವು ಸಮಾಜದಲ್ಲಿ ಹೇಗೆ ವರ್ತಿಸುತ್ತೇವೆಯೋ ಹಾಗೆಯೇ ಸಮಾಜ ನಮ್ಮೊಂದಿಗೆ ವರ್ತಿಸುತ್ತದೆ. ಸಮಾಜದಲ್ಲಿ ಪ್ರತಿಯೊಬ್ಬರಿಗೂ ಬದುಕುವ ಹಕ್ಕಿದೆ, ಮನುಷ್ಯ ಸೇರಿ ಇತರ ಜೀವಸಂಕುಲಗಳಿಗೂ ಕೂಡ.

ಸಮಾಜದಲ್ಲಿ ಮನುಷ್ಯರಾದ ನಾವುಗಳು ಯಾವುದಾದರೊಂದು ಕಾರ್ಯ ಮಾಡುವಾಗ ಅದರಿಂದ ಯಾರಿಗೂ ತೊಂದರೆ, ಉಪದ್ರ ಆಗದಿದ್ದ ಹಾಗೆ ನೋಡಿಕೊಳ್ಳಬೇಕು, ಪ್ರಾಣಿ ಪಕ್ಷಿಗಳಿಗೂ ಸೇರಿ. ಆದರೆ ಇಂದು ಮತಿಗೇಡಿ ಮಾನವ ತನ್ನ ಆಡಂಭರ, ಶೋಕಿ, ಪ್ರತಿಷ್ಠೆ, ಪ್ರಚಾರದ ತೆವಲಿಗಾಗಿ ಪರರಿಗಾಗುವ ಉಪದ್ರವನ್ನು ಲೆಕ್ಕಿಸದೇ ತನ್ನ ತೀಟೇ ತೀರಿಸಿಕೊಳ್ಳುತ್ತಿದ್ದಾನೆ ಎಂದರೂ ತಪ್ಪಾಗಲಾರದು.

ಸಮಾಜ ಮನುಷ್ಯ ಜೀವನದ ಪ್ರತಿಯೊಂದು ಕಾರ್ಯಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಯುವಜನತೆ ಮದ್ಯಪಾನ, ಧೂಮಪಾನ, ತಂಬಾಕು ಸೇವನೆ, ಮಾದಕವಸ್ತುಗಳ ದಾಸರಾಗುತ್ತಿರುವುದು ಹಾಗು ವಿದ್ಯಾವಂತರು ಭ್ರಷ್ಟ ರಾಜಕಾರಣಿಗಳ ಅಂಧಭಕ್ತಿಯ ಗುಲಾಮರಾಗುತ್ತಿರುವುದು ಕೂಡ ಸಮಾಜದ ಮೇಲೆ ಭಾರೀ ದುಷ್ಪರಿಣಾಮ ಬೀರುತ್ತಿರುವ ಕೆಟ್ಟ ಚಟುವಟಿಕೆಗಳಾಗಿವೆ.

"ಸಮಾಜ" ಇದು ಪ್ರಬಂಧ ಸ್ಪರ್ಧೆಯ ವಿಷಯವಾದುದರಿಂದ ನಾನು ಇಲ್ಲಿಗೆ ನಿಲ್ಲಿಸುತ್ತೇನೆ. ನೀವು ನಿಮ್ಮ ಚಿಂತನಾ ಶೀಲಾ ಬರವಣಿಗೆಯ ಮೂಲಕ ಈ ವಿಷಯದ ಕುರಿತು ತಮ್ಮ ಸ್ವ-ಅಭಿಪ್ರಾಯವನ್ನು ಬರೆದು ಕಳುಹಿಸಿ..

### ಸಂಪಾದಕರ ನುಡಿ

"ಉಪೇಂದ್ರರವರು ಸ್ಥಾಪಿಸಿದ ಪ್ರಜಾಕೀಯ ಕಷ್ಟ ಎನ್ನುವವರಿಗೆ ಭ್ರಷ್ಟ ರಾಜಕೀಯದಲ್ಲಿ ಇಷ್ಟವಾಗಿದ್ದಾದರೂ ಏನು".? –ಮತ

# ಚುನಾವಣೆ



ಚುನಾವಣೆ ಎಂದರೆ ಕೇವಲ ರಾಜಕೀಯ ಕ್ಷೇತ್ರದಲ್ಲಿ ಮಾತ್ರ ಚಾಲ್ತಿಯಲ್ಲಿರುವುದಲ್ಲ. ಯಾವುದೆಲ್ಲಾ ಸಂಘ, ಸಂಸ್ಥೆಗಳ ಕಾರ್ಯಕ್ಷೇತ್ರಗಳಲ್ಲಿ ಕೆಲವೊಂದು ಹುದ್ದೆಗೆ ನೇಮಕಾತಿ ಮಾಡುವ ಅವಶ್ಯಕತೆ ಇರುತ್ತದೆಯೋ ಅಲ್ಲೆಲ್ಲಾ ಆಯಾಯ ಹುದ್ಧೆಗನುಗುಣವಾಗಿ ನೀತಿ, ನಿಯಮಗಳನ್ನು ಅಳವಡಿಸಿಕೊಂಡು ಚುನಾವಣೆ ನಡೆಯುತ್ತದೆ. ಆದರೆ ಚುನಾವಣೆ ಎನ್ನುವ ವಿಷಯ ಭಾರೀ ಪ್ರಚಾರ ಹಾಗು ಪ್ರಚಲಿತದಲ್ಲಿರುವುದು ಮಾತ್ರ ರಾಜಕೀಯ ಕ್ಷೇತ್ರದಲ್ಲಿ.

ರಾಜಕೀಯ ವಿಷಯದ ಕುರಿತು ಸಾರ್ವಜನಿಕರು ಎಷ್ಟು ಅಸಡ್ಡೆ ತೋರುವರೋ ಅದು ಅವರ ಜೀವನವನ್ನು ಅಷ್ಟೇ ಅಸಹ್ಯಗೊಳಿಸುತ್ತದೆ. ಇದಕ್ಕೆ ಪ್ರತ್ಯಕ್ಷ ನಿದರ್ಶನವೇ ನಮ್ಮ ದೇಶದಲ್ಲಾಗುತ್ತಿರುವ ಭ್ರಷ್ಟಾಚಾರದ ರಾಜರೋಷ ಪ್ರದರ್ಶನ. ರಾಜಕೀಯ ವ್ಯವಸ್ಥೆಯ ಚುನಾವಣಾ ಸಂದರ್ಭದಲ್ಲಿ ಜನರು ಹಣ, ಹೆಂಡ, ಉಡುಗೊರೆ, ಆಹಾರ ಭಿಕ್ಷೆ, ಜಾತಿ, ಧರ್ಮ, ಪಕ್ಷ, ಪ್ರಚಾರ, ದೊಣ್ಣೆನಾಯಕ ಎಂದು–ಕೊಂಡು ತಮ್ಮ ಅಮೂಲ್ಯವಾದ ಮತವನ್ನು ಮಾರಿಕೊಳ್ಳುತ್ತಾರೆ. ಆಮೇಲೆ ಪ್ರತಿಯೊಂದು ಸರ್ಕಾರಿ ಸವಲತ್ತನ್ನು ಪಡೆಯಲು ಲಂಚ ನೀಡಬೇಕು, ಲಂಚ ನೀಡಿಯೂ ಕೆಲಸವಾಗದಿದ್ದಾಗ ಬೀದಿಗಿಳಿದು ಹೋರಾಟ, ಮುಷ್ಕರಗಳನ್ನು ಮಾಡುತ್ತಿದ್ದಾರೆ.

ನಮ್ಮ ದೇಶದಲ್ಲಿ ಶಿಕ್ಷಣ ಮುಂದುವರಿದಿದೆ ಹಾಗು ತಂತ್ರಜ್ಞಾನ ಅಭಿವೃದ್ಧಿಯಾಗಿದೆ. ಆದ–ರೆ ಇವತ್ತಿಗೂ ವಿದ್ಯಾವಂತ ಜನರೇ ರಾಜಕೀಯ ಪಕ್ಷಗಳ ಹಾಗು ಪುಂಗಿ, ಪುಡಂಗಿ, ಡೋಂಗಿ ರಾಜಕಾರಣಿಗಳ ಅಂಧಭಕ್ತಿಯ ಗುಲಾಮರಾಗುತ್ತಿರುವುದು ದೇಶದ ದೊಡ್ಡ ದುರಂತವಾಗಿದೆ. ಇಲ್ಲಿ ತಪ್ಪು ಭ್ರಷ್ಟ, ದುಷ್ಟ ರಾಜಕಾರಣಿಗಳದ್ದಲ್ಲ ಅಂತಹವರನ್ನು ಆರಿಸುತ್ತಿರುವ ದೇಶದ ಜನರದ್ದು.

ರಾಜಕಾರಣಿಗಳು ಹಾಗು ಸರ್ಕಾರಿ ಕೆಲಸಗಾರರು ಇಂದು ಕಣ್ಣೆದುರೇ ಭ್ರಷ್ಟಾಚಾರ ಮಾಡುತ್ತಿರುವುದು ಗೊತ್ತಿದ್ದರು ಅವರನ್ನು ಪ್ರಶ್ನಿಸಲು ಧೈರ್ಯ ಮಾಡದ ಜನರು, ಅವರ ಹೆತ್ತವರು ಹಾಗು ಅಜ್ಜ–ಅಜ್ಜಿಯರು ಹುಟ್ಟುವ ಮೊದಲೇ ಸತ್ತಿರುವ ಗಾಂಧೀಜಿ, ನೆಹರು, ಪಟೇಲ್, ಅಂಬೇಡ್ಕರ್, ಸಾವರ್ಕರ್, ಟಿಪ್ಪು ಸುಲ್ತಾನ್, ಗೋಡ್ಸೆಯ ಬಗ್ಗೆ ಎಲ್ಲೆಂದರಲ್ಲಿ ಬಾಯಿಗೆ ಬಂದಂಗೆ ಮಾತನಾಡುತ್ತಾ "ವರ್ತಮಾನದಲ್ಲಿ ಇತಿಹಾಸವನ್ನು ಕೆದಕಿ ತಮ್ಮ ಹಾಗು ಮುಂದಿನ ಪೀಳಿಗೆಯ ಭವಿಷ್ಯವನ್ನು ಹಾಳುಮಾಡುತ್ತಿದ್ದಾರೆ". ಕೆಲವು ಕಡೆ ಇಂತಹ "ಅಂಧಭಕ್ತಿಯ ಗುಲಾಮರು" ಬಳಸುವ ಅವಾಚ್ಯ, ಅಶ್ಲೀಲ ಪದಗಳನ್ನು ನೋಡಿದರೆ ಇವುಗಳು ಹುಟ್ಟಿದ್ದು ಮನುಷ್ಯರಿಗೆಯೇ ಎನ್ನುವ ಅನುಮಾನ ಮೂಡುತ್ತದೆ.

ನಮ್ಮ ದೇಶದಲ್ಲಿ ಪ್ರಸ್ತುತ ಎರಡು ಪ್ರಬಲ ಭ್ರಷ್ಟ ರಾಜಕೀಯ ಪಕ್ಷಗಳು ಕೇಂದ್ರ ಸರ್ಕಾರದಲ್ಲಿ ಹಾಗು ದೇಶದ ವಿವಿಧ ರಾಜ್ಯಗಳಲ್ಲಿ ಆಡಳಿತ ಹಾಗು ವಿರೋಧ ಪಕ್ಷದಲ್ಲಿ ರಾರಾಜಿಸುತ್ತಿವೆ. ಹಾಗೆಯೇ ಅವುಗಳಂತೆ ಭ್ರಷ್ಟಾಚಾರದಲ್ಲಿ ಮುಳುಗಿರುವ ಇತರ ರಾಜಕೀಯ ಪಕ್ಷಗಳ ಹಗರಣ, ಅಕ್ರಮಗಳನ್ನು ನೋಡಿಯೂ ಕೂಡ ದೇಶದ ಬಹುತೇಕ ಜನರು ಎಲ್ಲಾ ಚುನಾವಣೆಯಲ್ಲಿಯೂ ಅಂತವರನ್ನೇ ಆರಿಸುತ್ತಿರುವುದನ್ನು ನೋಡಿದಾಗ ಬಹಳ ಬೇಸರವಾಗುತ್ತದೆ.

ನಮ್ಮ ದೇಶದ ರಾಜಕೀಯ ವ್ಯವಸ್ಥೆ ಸರಿಯಾದಲ್ಲಿ ಪ್ರತಿಯೊಂದು ಸಾಮಾಜಿಕ ವ್ಯವಸ್ಥೆ ಅಭಿವೃದ್ಧಿಯಾಗಿ ದೇಶ ವಿಶ್ವದಲ್ಲಿಯೇ ನಂ.1 ಆಗುತ್ತದೆ. ಇದು ಅಸಾಧ್ಯ ಎಂದು ಹೆಚ್ಚಿನವರು ಅಂ–ದುಕೊಂಡಿದ್ದಾರೆ. ಈ ಭೂಮಿಯಲ್ಲಿ ಮನುಷ್ಯ ಮನಸ್ಸು ಮಾಡಿದರೆ "ಯಾವುದು ಅಸಾಧ್ಯವಲ್ಲ ಆದರೆ ಕಷ್ಟಸಾಧ್ಯ ಎನ್ನಬಹುದು".!

ನಮ್ಮ ದೇಶದ ವಿದ್ಯಾರ್ಥಿ ಯುವಜನತೆ ಮನಸ್ಸು ಮಾಡಿದಲ್ಲಿ ನಮ್ಮ ರಾಜಕೀಯ ವ್ಯವಸ್ಥೆಯನ್ನು ನೀರು ಕುಡಿದಷ್ಟು ಸುಲಭವಾಗಿ ಬದಲಾಯಿಸಬಹುದು. ನಮ್ಮ ದೇಶದಲ್ಲಿ ಪ್ರತೀ 4 ರಿಂದ 6 ಮನೆಗೊಬ್ಬ/ಳು ಶಾಲೆಗೆ ಹೋಗುವ ವಿದ್ಯಾರ್ಥಿ ಇದ್ದರೆ, ಪ್ರತೀ 8 ರಿಂದ 10 ಮನೆಗೊಬ್ಬ/ಳು ಕಾಲೇಜಿಗೆ ಹೋಗುವ ವಿದ್ಯಾರ್ಥಿ ಇದ್ದೇ ಇರುತ್ತಾರೆ. ಹಾಗಾಗಿ ಸಾಮಾಜಿಕ ವ್ಯವಸ್ಥೆಯ ಅಸಮತೋಲನವನ್ನು ಈಗಿರುವ ತಂತ್ರಜ್ಞಾನವನ್ನು ಬಳಸಿಕೊಂಡು ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವುದು ಸುಲಭಸಾಧ್ಯ. ನಮ್ಮ ದೇಶದಲ್ಲಿ ಗ್ರಾಮ ಪಂಚಾಯತ್, ವಿಧಾನಸಭೆ ಮತ್ತು ಲೋಕಸಭೆಯಂತಹ ಪ್ರಮುಖ ಚುನಾವಣೆಯಲ್ಲಿ ಸ್ಪರ್ಧಿಸಲು ಕ್ರಮವಾಗಿ 21, 25 ಮತ್ತು 25 ವರ್ಷ ವಯಸ್ಸಾಗಿರಬೇಕು. ಹೀಗಿರುವಾಗ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿರುವಾಗಲೇ ಚುನಾವಣೆಯಲ್ಲಿ ಸ್ಪರ್ಧಿಸಿದಲ್ಲಿ ದೇಶ ಎಲ್ಲಾ ವಿಧದಲ್ಲಿಯೂ ಅಭಿವೃದ್ಧಿ ಹೊಂದಲು ಸಾಧ್ಯವಿದೆ. ಆದರೆ ಇದರ ಕುರಿತು ಯಾವುದೇ ರೀತಿಯ ಅರಿವನ್ನು ಮೂಡಿಸುವ ಶಿಕ್ಷಣ ವ್ಯವಸ್ಥೆ ನಮ್ಮಲ್ಲಿ ಇಲ್ಲ ಎನ್ನುವುದೇ ಬೇಸರದ ಸಂಗತಿ.

ನಮ್ಮ ಈ ಪತ್ರಿಕೆಯ ಪ್ರಮುಖ ಉದ್ದೇಶವೇ ವಿದ್ಯಾರ್ಥಿ ಯುವಜನತೆಯನ್ನು ದೇಶದ ಸಾಮಾಜಿಕ ವಿಷಯಗಳಲ್ಲಿ ಸರ್ವತೋಮುಖವಾಗಿ ವಿಚಾರವಂತರನ್ನಾಗಿಸುವುದು. ಅದಕ್ಕೆ ಸಂಬಂಧಿಸಿದಂತೆ ಚುನಾವಣಾ ಕ್ರಮ ಹಾಗು ನೀತಿ ನಿಯಮಗಳಲ್ಲಿ ಬಹಳ ಸರಳ ಹಾಗು ಸಲೀಸಾದ ಬದಲಾವಣೆಯನ್ನು ತರಲು ನಾವುಗಳು ಮೊದಲು ಹೋರಾಡಬೇಕಾಗಿದೆ.

## ಮತದಾನ ಹಾಗು ಮತಎಣಿಕೆ:



ಚುನಾವಣೆ ಘೋಷಣೆಯಾದ ದಿನದಿಂದ 21 ದಿನದೊಳಗೆ ಚುನಾವಣೆಯ ಎಲ್ಲಾ ಪ್ರಕ್ರೀಯೆಗಳು ಮುಗಿದು ಫಲಿತಾಂಶ ಕೂಡ ಬರಬೇಕು. ಇದರಿಂದ ತಿಂಗಳಾನುಗಟ್ಟಲೆ ಜನರಿಗಾಗುವ ಚುನಾವಣಾ ನೀತಿಸಂಹಿತೆಯ ಕಿರಿಕಿರಿ ತಪ್ಪುತ್ತದೆ. ಚುನಾವಣಾ ದಿನಾಂಕ ಘೋಷಣೆ ಮಾಡುವ ಮೊದಲು ಆಯೋಗವು ಎಲ್ಲಾ ತಯಾರಿಯನ್ನು ಮಾಡಿಕೊಳ್ಳಬೇಕು. ಚುನಾವಣೆಯನ್ನು ಕಟ್ಟುನಿಟ್ಟಾಗಿ ನಡೆಸಿದರೆ ಮಾತ್ರ ಜನರಿಗೆ ಅದರ ಪ್ರಾಮುಖ್ಯತೆಯ ಅರಿವಾಗುತ್ತದೆ.

1) ಕೊರೋನದಿಂದಾಗಿ 2020ರ ಗ್ರಾಮ ಪಂಚಾಯತ್ ಚುನಾವಣೆಯನ್ನು ಸಾಮಾಜಿಕ ಅಂತರ ಕಾಯ್ದುಕೊಳ್ಳುವ ದೃಷ್ಟಿಯಿಂದ ಹಿಂದಿನ ಚುನಾವಣೆಗಿಂತ ಎರಡು ಪಟ್ಟು ಜಾಸ್ತಿ ಭೂತ್‌ಗಳಲ್ಲಿ ರಾಜ್ಯಾದ್ಯಂತ ಜನರಿಗೆ ಮತದಾನ ಮಾಡಲು ಅನುವು ಮಾಡಿಕೊಡಲಾಯಿತು. ಇದರಿಂದ ಮತದಾನ ಯಾವುದೇ ರೀತಿಯ ನೂಕುನುಗ್ಗಲು ಇಲ್ಲದೇ ಅವಧಿಗೂ ಮೊದಲೇ ಮತದಾನ ಪ್ರಕ್ರೀಯೆ ಮುಗಿದಿತ್ತು.

2) ಇದೇ ರೀತಿ ಮುಂದಿನ ಚುನಾವಣೆಗಳಲ್ಲಿ ಪ್ರತಿ 350 ರಿಂದ 400 ಮತದಾರರಿಗೆ ಅನುಗುಣವಾಗಿ ಒಂದೊಂದು ಭೂತ್‌ಗಳನ್ನು ಮಾಡಿ ಬೆಳಿಗ್ಗೆ 7ಗಂಟೆ ಇಂದ ಮಧ್ಯಾಹ್ನ 3ಗಂಟೆ ತನಕ ಮತದಾನ ಆಗಬೇಕು.

3) ಪ್ರತಿಯೊಬ್ಬರ ಮತದಾನದ ಗುರುತಿನ ಚೀಟಿಯನ್ನು ಆಧಾರ್ ಕಾರ್ಡಿಗೆ ಲಿಂಕ್ ಮಾಡಿರಬೇಕು. ಮತದಾನದ ಸಮಯದಲ್ಲಿ ಬೆರಳಚ್ಚು ಪರಿಶೀಲಿಸುವ ಯಂತ್ರದ ಮೂಲಕ ಪ್ರತಿಯೊಬ್ಬ ಮತದಾರನ ಗುರುತನ್ನು ಖಚಿತಪಡಿಸಿಕೊಂಡ ನಂತರ ಮತದಾನಕ್ಕೆ ಅವಕಾಶ ಮಾಡಿಕೊಡಬೇಕು. ಕೈಕಾಲು ತೊಂದರೆ ಇರುವವರಿಗೆ ಕಣ್ಣಿನ ಸ್ಕ್ಯಾನ್ ಮೂಲಕ ಪರಿಶೀಲಿಸಿ ಮತದಾನಕ್ಕೆ ಅವಕಾಶ ಕಲ್ಪಿಸಬಹುದು.

4) ಮತದಾನ ಮೆಷಿನ್‌ನಲ್ಲಿ ನಡೆಯಬೇಕು. ಅಲ್ಲಿ ಸ್ಪರ್ಧಿಸಿದ ವ್ಯಕ್ತಿಗಳ ಕ್ರಮ ಸಂಖ್ಯೆ, ಹೆಸರು, ಭಾವಚಿತ್ರ, ಪಕ್ಷದ ಚಿಹ್ನೆಗಳು ಬಣ್ಣದಲ್ಲಿ ಅಚ್ಚಾಗಿರಬೇಕು. ಮತದಾರ ತಾನು ಮತದಾನ ಮಾಡಲು ಆಯ್ಕೆ ಮಾಡಬೇಕಾಗಿರುವ ವ್ಯಕ್ತಿಯ ಮುಂದೆ ಇರುವ ಬಟನ್ ಒತ್ತಿದಾಗ ಮೆಷಿನ್‌ನಲ್ಲಿ ಬೆಳಕು ಬರಬೇಕು ಹಾಗೂ ಎಲ್ಲಾ ಮಾಹಿತಿಯನ್ನು ಒಳಗೊಂಡ ಸಣ್ಣ ಚೀಟಿ ಹೊರ ಬರಬೇಕು. ಅದನ್ನು ಮತದಾರ ತೆಗೆದು ತನ್ನ ಆಯ್ಕೆ ಸರಿಯಾಗಿದೆಯೇ ಎಂದು ಸರಿಯಾಗಿ ಪರಿಶೀಲಿಸಿ ಅದನ್ನು ಗಾಜಿನ ಡಬ್ಬಿಯೊಳಗೆ ಹಾಕಬೇಕು (ಒಂದುವೇಳೆ ತಾನು ಹಾಕಿದ್ದು ಒಬ್ಬರಿಗೆ ಚೀಟಿಯಲ್ಲಿ ಇನ್ನೊಬ್ಬರ ಕುರಿತು ಮಾಹಿತಿ ಇದ್ದರೆ ಅಲ್ಲಿಯೇ ಪರಿಶೀಲಿಸಲು ಬಹಳ ಸುಲಭವಾಗುತ್ತದೆ). ಅಲ್ಲಿಯ ತನಕ ಮೆಷಿನ್‌ನಲ್ಲಿ ಆತ ಒತ್ತಿದ ಬಟನಲ್ಲಿ ಬೆಳಕು ಬೆಳಗುತ್ತಿರಬೇಕು.

5) ಬೇರೆ ಜಿಲ್ಲೆಯಲ್ಲಿರುವ ಮತದಾರರಿಗೆ ಪ್ರತೀ ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯತಿ ಕಚೇರಿಯಲ್ಲಿ ಒಂದು ಮತಗಟ್ಟೆ ನಿರ್ಮಿಸಿ ಅಲ್ಲಿ ಮತದಾನ ಮಾಡುವ ಅವಕಾಶ ಕಲ್ಪಿಸಬೇಕು. ಹಾಗೆಯೇ ಅಂತಹ ಮತದಾರರ ಮಾಹಿತಿಯನ್ನು ಚುನಾವಣಾ ಆಯೋಗ ಮೊದಲೇ ಆನ್‌ಲೈನ್ ಮೂಲಕ ಅರ್ಜಿ ಹಾಕುವುದರ ಮೂಲಕ ಪಟ್ಟಿ ಮಾಡಿಕೊಂಡಿರಬೇಕು.

6) ಮಧ್ಯಾಹ್ನ 3ಗಂಟೆಯ ನಂತರ ಮತದಾನ ನಡೆದ 1ಕಿಮೀ ವ್ಯಾಪ್ತಿಯಲ್ಲಿ 144 ಸೆಕ್ಷನ್ ಜಾರಿ ಮಾಡಿ ಆ ಜಾಗದ ಸುತ್ತಮುತ್ತ ಯಾರು ಓಡಾಡದಂತೆ ನೋಡಿಕೊಂಡು ಮತದಾನ ನಡೆದ ಭೂತ್‌ಗಳಲ್ಲಿಯೇ ಸಂಜೆ 4ರಿಂದ ಮತಎಣಿಕೆ ಕಾರ್ಯ ಆರಂಭಿಸಬೇಕು.

7) ಆಗ ಮತದಾನಕ್ಕೆ ಬಂದ ಅಧಿಕಾರಿಗಳಿಂದಲೇ ಚುನಾವಣಾ ಅಭ್ಯರ್ಥಿಗಳ ಏಜೆಂಟರ ಮುಂದೆ ಸಂಜೆ 7ಗಂಟೆಯ ಮೊದಲು ಮತಎಣಿಕೆ ಕಾರ್ಯ ಮುಗಿದು ಫಲಿತಾಂಶ ಕೂಡ ಬರುವುದರಿಂದ ಸಮಯ ಉಳಿಯುತ್ತದೆ ಹಾಗೂ ಅನಾವಶ್ಯಕ ಖರ್ಚು ಕಡಿಮೆಯಾಗುತ್ತದೆ. ಮೆಷಿನ್ ಹಾಗೂ ಡಬ್ಬಿ ಎರಡೂ ಕಡೆಯಲ್ಲಿ ಬಿದ್ದ ಮತಗಳನ್ನು ಲೆಕ್ಕಹಾಕಿ ಸುಲಭವಾಗಿ ತಾಳೆ ಮಾಡಲು ಸಾಧ್ಯವಾಗುವುದರಿಂದ ಚುನಾವಣೆ ಪಾರದರ್ಶಕತೆಯಿಂದ ನಡೆದು ಯಾವುದೇ ರೀತಿಯ ಅನುಮಾನಾಸ್ಪದಗಳಿಗೆ ಅವಕಾಶ ಸಿಗುವುದಿಲ್ಲ.

8) ಮತದಾನ ನಡೆಯುವ ಭೂತ್‌ನ ಹೊರಗೆ ಮತ್ತು ಒಳಗೆ ಸಿಸಿ ಕ್ಯಾಮರಗಳನ್ನು ಇಡಬೇಕು (ಈ ಕ್ಯಾಮರಗಳು ಮುಂದೆ ಕೂಡ ಸರ್ಕಾರದ ಬೇರೆ–ಬೇರೆ ಕೆಲಸಗಳಿಗೆ ಉಪಯೋಗವಾಗುತ್ತವೆ. ಉದಾ:– ಸ್ಪರ್ಧಾತ್ಮಕ ಪರೀಕ್ಷೆ ನಡೆಯುವಲ್ಲಿ ಹಾಗು ಇನ್ನಿತರ ಸೂಕ್ಷ್ಮ ಕಾರ್ಯಕ್ರಮ ಮತ್ತು ಕಾರ್ಯಚರಣೆಗಳಲ್ಲಿ).

9) ಹೆಚ್ಚಿನ ಎಲ್ಲಾ ಭೂತ್‌ಗಳಲ್ಲಿ ರಾಜಕೀಯ ಪಕ್ಷಗಳ ಏಜೆಂಟರನ್ನು ಕೂರಿಸಿರುತ್ತಾರೆ ಹಾಗೂ ಹೊರಗೆ ಪೋಲೀಸ್ ಸಿಬ್ಬಂದಿಗಳ ಇರುವಿಕೆ ಕೂಡ ಇರುತ್ತದೆ. ಈ ರೀತಿಯಾಗಿ ಮತಗಟ್ಟೆಗಳಲ್ಲಿ ಪಾರದರ್ಶಕತೆಯನ್ನು ಕಾಪಾಡಬಹುದು.

10) ಒಂದು ರಾಜ್ಯದಲ್ಲಿ ಎಲ್ಲಾ ವಿಧಾನಸಭಾ ಕ್ಷೇತ್ರದಲ್ಲಿ ಒಂದೇ ದಿನ ವಿಧಾನಸಭಾ ಚುನಾವಣೆ ಮತ್ತು

**(8ನೇ ಪುಟಕ್ಕೆ..)**

## ಪತ್ರಿಕಾ ಚಂದಾದಾರಿಕೆ:

**ನೇರ ಪತ್ರಿಕೆ :– ವಾರ್ಷಿಕ ಕೇವಲ ರೂ.400/– (ಉಡುಪಿ ಹಾಗು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಅಂಚೆ ಮೂಲಕ ಕಳುಹಿಸಲಾಗುವುದು).**

**ಇ–ಪತ್ರಿಕೆ :– ವಾರ್ಷಿಕ ಕೇವಲ ರೂ.250/– (ಪತ್ರಿಕಾ ವೆಬ್‌ಸೈಟಿನಲ್ಲಿ ಓದಬಹುದು). ಯಾರು ಬೇಕಾದರು ಪತ್ರಿಕಾ ವೆಬ್‌ಸೈಟ್ www.yuvakaravali.com ಲಾಗಿನ್ ಅಗಿ ಮಾಹಿತಿ ಭರ್ತಿ ಮಾಡಿ ಅಲ್ಲೇ ಹಣ ಪಾವತಿಸಿ ಪತ್ರಿಕಾ ಚಂದಾದಾರರಾಗಬಹುದು. ಇಲ್ಲವಾದಲ್ಲಿ ನಮ್ಮ ಮೊಬೈಲ್ ನಂ. 7204708427, 8970015524ಗೆ ಕರೆ ಮಾಡಿದಲ್ಲಿ ನಾವು ಸಹಕರಿಸುತ್ತೇವೆ.**

## ಜಾಹೀರಾತಿಗಾಗಿ:

**ಪತ್ರಿಕೆಯಲ್ಲಿ ಜಾಹೀರಾತು ಪ್ರಸಾರ ಮಾಡಲು ಬಯಸುವವರು ನೇರವಾಗಿ ನಮ್ಮ ಮೊಬೈಲ್ ನಂ. 7204708427, 8970015524ಗೆ ಕರೆ ಮಾಡಬಹುದು.**

## ಸಂಪಾದಕರ ನುಡಿ

**"ನಮ್ಮ ಜೀವನ ಸಮುದ್ರದಂತಿರಬೇಕು. ಎಷ್ಟೇ ಮಳೆ, ಗಾಳಿ, ಬಿಸಿಲು ಬರಲಿ ರುಚಿ, ಪ್ರಮಾಣ, ಗುಣ ಬದಲಾಗೋಲ್ಲ. ಎಂಥದ್ದನ್ನೇ ಆಗಲಿ ತನ್ನೊಳಗೆ ಸೇರಿಸಿಕೊಳ್ಳುತ್ತದೆ ಆದರೆ ತನ್ನಲ್ಲಿ ಕಿಂಚಿತ್ತು ಕಸ, ಕಡ್ಡಿ, ಕಲ್ಮಶವನ್ನು ಇಟ್ಟುಕೊಳ್ಳೊಲ್ಲ. ನಮ್ಮ ಜೀವನದಲ್ಲೂ ಅನೇಕರು ಬರುತ್ತಾರೆ. ಎಲ್ಲರನ್ನೂ ಸ್ವಾಗತಿಸಬೇಕು, ಉತ್ತಮರನ್ನು ಸತ್ಕರಿಸಿದರೆ ಅಧಮರನ್ನು ತಿರಸ್ಕರಿಸಬೇಕು". –ಮತ**

(7ನೇ ಪುಟದಿಂದ..)

ಮತಎಣಿಕೆ ನಡೆಯಬೇಕು. ಭದ್ರತೆಗೆ ಬೇಕಾದಲ್ಲಿ ಪಕ್ಕದ ರಾಜ್ಯದ ಪೋಲೀಸರನ್ನು ಕರೆಸಿಕೊಳ್ಳಬೇಕು. ಲೋಕಸಭೆ ಚುನಾವಣೆ ಮತ್ತು ಮತಎಣಿಕೆ ಕೂಡ ದೇಶದಾದ್ಯಂತ ಒಂದೇ ದಿನ ನಡೆಯಬೇಕು. ಭದ್ರತೆಗೆ ಬೇಕಾದಲ್ಲಿ ಮಿಲಿಟರಿ ಕರೆಸಿಕೊಳ್ಳಬೇಕು.

11) ಚುನಾವಣೆಯಲ್ಲಿ ಭಾಗವಹಿಸುವ ಸಿಬ್ಬಂದಿಗಳ ಪೋಸ್ಟಲ್ ಓಟು ಅವರು ಮತದಾನ ಮಾಡಬೇಕಾಗಿರುವ ಭೂತ್‌ಗೆ ಮತಎಣಿಕೆ ಆರಂಭಿಸುವ ಮೊದಲು ಬರಬೇಕು.

12) ಆ ಒಂದು ಭೂತ್‌ನಲ್ಲಿ ಎಷ್ಟು ಜನ ಪೋಸ್ಟಲ್ ಓಟು ಮಾಡಲು ಅರ್ಹರಿದ್ದಾರೆ ಎನ್ನುವುದರ ಕುರಿತು ಸಂಪೂರ್ಣ ಮಾಹಿತಿಯನ್ನು ಮತಗಟ್ಟೆಯ ಹೊರಗಡೆ ಹಾಕಬೇಕು. ಇದರಿಂದ ಅಗತ್ಯಕ್ಕಿಂತ ಜಾಸ್ತಿ ಪೋಸ್ಟಲ್ ಓಟು ಬಂದರೆ ಸುಲಭವಾಗಿ ಮತಎಣಿಕೆ ಸಮಯದಲ್ಲಿ ತಿಳಿಯುತ್ತದೆ.

13) ಚುನಾವಣೆಯ ಸಮಯದಲ್ಲಿ ಅನಾವಶ್ಯಕವಾಗಿ ತೊಂದರೆ ಕೊಡಲು ಹವಣಿಸುವವರಿಗೆ ಭಾರೀ ದಂಡದೊಂದಿಗೆ ಕಠಿಣ ಶಿಕ್ಷೆ ವಿಧಿಸಬೇಕು.

14) ಚುನಾವಣೆಯ ದಿನ ಅಥವಾ ಇತರ ದಿನದಲ್ಲಿ ಯಾವುದೇ ಪಕ್ಷದ ಅಥವಾ ಅಭ್ಯರ್ಥಿಯ ಕಡೆಯಿಂದ ಮತಗಟ್ಟೆಯ ಸಮೀಪ ಅಥವಾ ಎಲ್ಲಿಯೂ ಟೆಂಟ್ ಹಾಕಿ ಪ್ರಚಾರ ಮಾಡುವಂತಿಲ್ಲ.

15) ಚುನಾವಣೆಯ ದಿನ ಮತಗಟ್ಟೆಗೆ ಮತದಾರರು ಬರಲು ಸ್ವಂತ ವಾಹನ ಇಲ್ಲದವರಿಗೆ ಚುನಾವಣಾ ಆಯೋಗವೇ ಆಯಾಯ ಮತಗಟ್ಟೆಯ ಮತದಾರರ ಸಂಖ್ಯೆಗನುಗುಣವಾಗಿ ರಿಕ್ಷಾ ಹಾಗೂ ಕ್ಯಾಬ್ ವ್ಯವಸ್ಥೆ ಮಾಡಬೇಕು. ಆ ವಾಹನಗಳಿಗೆ ಕಡ್ಡಾಯವಾಗಿ ಗುರುತಿನ ಚೀಟಿ ನೀಡುವುದರ ಜೊತೆಗೆ ದಿನದ ಬಾಡಿಗೆಯನ್ನು ಮೊದಲೇ ನಿಗದಿಸಿಕೊಂಡು ತಪ್ಪದೇ ಆ ದಿನವೇ ನೀಡಬೇಕು. ಪಕ್ಷದ ಅಥವಾ ಅಭ್ಯರ್ಥಿಯ ಕಡೆಯಿಂದ ಮತದಾರರಿಗೆ ಯಾವುದೇ ವಾಹನದ ವ್ಯವಸ್ಥೆ ಮಾಡುವಂತಿಲ್ಲ. ಗುರುತಿನ ಚೀಟಿ ಪಡೆದ ವಾಹನ ಚಾಲಕರು/ಮಾಲಕರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸದಿದ್ದರೆ ದಂಡ ಕಟ್ಟುವಂತಿರಬೇಕು.

16) ವಾಹನಗಳ ಬಾಡಿಗೆಯ ಹಣ ಹೊಂದಿಸುವ ಸಲುವಾಗಿ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಠೇವಣಿಯನ್ನು ಬೇಕಾದಲ್ಲಿ ಜಾಸ್ತಿ ಮಾಡಬಹುದು. ಇದರಿಂದ ಚುನಾವಣಾ ಆಯೋಗಕ್ಕೆ ಚುನಾವಣಾ ಖರ್ಚುದೂಗಿಸಲು ಸ್ವಲ್ಪಮಟ್ಟಿಗೆ ಆಧಾರವಾಗುತ್ತದೆ.

17) ಮತದಾನ ಶನಿವಾರ ಅಥವಾ ಭಾನುವಾರದಂದು ನಡೆಸಬೇಕು. ಆ ದಿನ ರಾಜ್ಯ(ವಿಧಾನಸಭೆ) ಹಾಗೂ ದೇಶ(ಲೋಕಸಭೆ)ದಲ್ಲಿ ಆಸ್ಪತ್ರೆ ಹಾಗೂ ಮೆಡಿಕಲ್ ಬಿಟ್ಟು ಉಳಿದೆಲ್ಲಾ ಖಾಸಗಿ ಹಾಗೂ ಸರ್ಕಾರಿ ವ್ಯವಹಾರಗಳು, ಸಂಸ್ಥೆಗಳು ಮುಚ್ಚಬೇಕು. ಒಂದು ರಾಜ್ಯ ಅಥವಾ ದೇಶದ ಆಡಳಿತ ವ್ಯವಸ್ಥೆಯನ್ನು ರೂಪಿಸುವ ಮಹತ್ವದ ದಿನದಂದು ಎಲ್ಲವೂ ಬಂದ್ ಇದ್ದರೆ ಯಾರಿಗೂ ತೊಂದರೆಯಾಗದು. (ಕರೋನ ಸಮಯದಲ್ಲಿ ತಿಂಗಳಾನುಗಟ್ಟಲೇ ಎಲ್ಲವೂ ಬಂದ್ ಇದ್ದಿತ್ತು).

ಖರ್ಚು ಕಡಿಮೆ ಮಾಡುವ ಉದ್ದೇಶದಿಂದ ಆಧುನಿಕ ತಂತ್ರಜ್ಞಾನ ಬಳಸಿ ಚುನಾವಣೆಯನ್ನು ನಡೆಸಬಹುದು. ಆದರೆ ಭಾರತದಂತ ದೊಡ್ಡ ಹಾಗೂ ಹೆಚ್ಚು ಜನಸಂಖ್ಯೆಯಿರುವ ಪ್ರಜಾಪ್ರಭುತ್ವ ದೇಶದಲ್ಲಿ ಅದು ಎಂದೆಂದಿಗೂ ಪ್ರಶ್ನಾತೀತ ಹಾಗೂ ನಂಬಲರ್ಹವಾದುದಲ್ಲ. ಏಕೆಂದರೆ ಎಲ್ಲಾ ತಂತ್ರಜ್ಞಾನಗಳು ಜನರ ಬರಿಗಣ್ಣಿಗೆ ಪಾರದರ್ಶಕವಾಗಿ ಕಾಣಸಿಗದು.

## ಮತದಾನ ಪ್ರಚಾರ:



* ಚುನಾವಣಾ ಅಧಿಸೂಚನೆ(ದಿನಾಂಕ) ಹೊರಡಿಸಿದ ನಂತರ ಯಾರು ಕೂಡ ಸಾರ್ವಜನಿಕವಾಗಿ ರಾಜಕೀಯದ ಕುರಿತು ಸಭೆ, ಸಮಾರಂಭ, ರ್‍ಯಾಲಿ, ಮನೆಮನೆ ಪ್ರಚಾರ ಮಾಡಬಾರದು.
* ಚುನಾವಣಾ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಚುನಾವಣಾ ಆಯೋಗ ಘೋಷಣೆ ಮಾಡಿದ ನಂತರ ಅಭ್ಯರ್ಥಿಗಳಾಗಲಿ, ಅವರ ಬೆಂಬಲಿಗರು, ಪಕ್ಷದ ಕಾರ್ಯಕರ್ತರು ಮನೆಮನೆಗೆ ತೆರಳಿ ಪ್ರಚಾರ ಮಾಡುವ ಹಾಗೆ ಇಲ್ಲ. ಅಭ್ಯರ್ಥಿ ಯಾವುದೇ ಖಾಸಗಿ/ಸರ್ಕಾರಿ ಸಭೆ, ಸಮಾರಂಭಗಳಿಗೆ ಚುನಾವಣೆ ಮುಗಿಯುವ ತನಕ ಹೋಗುವಂತಿಲ್ಲ.
* ಹಾಗೆಯೇ ಪ್ರಚಾರಕ್ಕೆ ಸುದ್ಧಿ ಮಾಧ್ಯಮ ಹಾಗೂ ಸೋಶಿಯಲ್ ಮೀಡಿಯಾ ಬಿಟ್ಟು ಬೇರೆ ಕಡೆ ಎಲ್ಲಿಯೂ ಯಾರು ಕೂಡ ಬಹಿರಂಗ ಪ್ರಚಾರ ಮಾಡುವಂತಿಲ್ಲ. ಎಲ್ಲಿಯೂ ಕೂಡ ಚುನಾವಣಾ ಅಭ್ಯರ್ಥಿಯ ಪರ ಪೋಸ್ಟರ್ ಹಾಗು ಬ್ಯಾನರ್ ಹಾಕಬಾರದು. ಸಾರ್ವಜನಿಕ ಸುದ್ಧಿಮಾಧ್ಯಮಗಳು ಎಲ್ಲಾ ಅಭ್ಯರ್ಥಿಗಳ ಪರ ಸಮನಾಗಿ ಪರಿಚಯ ನೀಡಬೇಕು.
* ಸಾರ್ವಜನಿಕ ನ್ಯೂಸ್ ಪೇಪರ್‌ಗಳಲ್ಲಿ ಚುನಾವಣಾ ಅಭ್ಯರ್ಥಿಗಳ ಪಟ್ಟಿ ಪ್ರಕಟವಾದ ನಂತರ ಪ್ರತಿನಿತ್ಯ ಮೊದಲ ಪುಟದಲ್ಲಿ ಆಯಾಯ ಕ್ಷೇತ್ರಗಳ ಎಲ್ಲಾ ಅಭ್ಯರ್ಥಿಗಳ ಕುರಿತು ಮತದಾನದ ದಿನದವರೆಗೆ ಸಮನಾಗಿ ಪರಿಚಯ ನೀಡುತ್ತಿರಬೇಕು.
* ಯಾವುದೇ ಸಾರ್ವಜನಿಕ ಸುದ್ದಿಮಾಧ್ಯಮ ಯಾವುದಾದರೂ ಪಕ್ಷ ಅಥವಾ ಅಭ್ಯರ್ಥಿಯ ಪರ ಜಾಸ್ತಿ ಪ್ರಚಾರ ನೀಡಿದರೆ ಅಂತಹ ಸುದ್ಧಿಮಾಧ್ಯಮಕ್ಕೆ ದಂಡವಿಧಿಸಿ ಚುನಾವಣೆಯ ತನಕ ಬಹಿಷ್ಕಾರ ಮಾಡಬೇಕು.
* ಹಾಗೆಯೇ ಸಾರ್ವಜನಿಕರಿಗೆ ಯಾವುದೇ ಅಭ್ಯರ್ಥಿ ಅಥವಾ ಆತನ ಬೆಂಬಲಿಗರು ಅಗತ್ಯಕ್ಕಿಂತ ಜಾಸ್ತಿ ಕರೆ ಮಾಡಿ ಕಿರಿಕಿರಿ ಮಾಡಿದರೆ ಕಂಪ್ಲೇಂಟ್ ಕೂಡ ಮಾಡಬಹುದು. ಅದಕ್ಕೆ ಅವರು ಭಾರೀ ದಂಡ ಕಟ್ಟುವಂತಿರಬೇಕು.
* ಚುನಾವಣಾ ಪ್ರಚಾರವನ್ನು ಆಯೋಗ ನೇಮಿಸಿದ ಅಧಿಕಾರಿಗಳು ಮತದಾರರ ಮತದಾನದ ಚೀಟಿಯೊಂದಿಗೆ ಮನೆಮನೆಗಳಿಗೆ ತೆರಳಿ ಅಭ್ಯರ್ಥಿಗಳ ಕುರಿತು ಸಂಪೂರ್ಣ ಮಾಹಿತಿ ನೀಡಿ ಚೀಟಿ ಕೊಡಬೇಕು. ಒಂದು ಮನೆ/ಕುಟುಂಬದ ಯಾವುದಾದರೊಬ್ಬ ಮತದಾರ ಅಧಿಕಾರಿಗಳಿಂದ ಸಂಪೂರ್ಣ ಮಾಹಿತಿ ಪಡೆದು ಮನೆಯ ಎಲ್ಲರ ಮತದಾನದ ಚೀಟಿ ಸ್ವೀಕರಿಸಬಹುದು.
* ಚುನಾವಣಾ ಪ್ರಚಾರ ಅಧಿಕಾರಿಗಳು ಮತದಾರರ ಮನೆಗೆ ಬಂದಾಗ ಮನೆಯಲ್ಲಿ ಯಾರು ಇಲ್ಲದಿದ್ದರೆ, ನಂತರ ಮನೆಯ ಯಾವುದಾದರೊಬ್ಬ ಮತದಾರ ಚುನಾವಾಣಾ ದಿನದ 12ಗಂಟೆಯ ಮೊದಲು ಅವರ ವ್ಯಾಪ್ತಿಯಲ್ಲಿ ಬರುವ ಗ್ರಾಮ ಅಥವಾ ಪಟ್ಟಣ ಪಂಚಾಯತ್ ಅಥವಾ ನಗರಸಭೆಗೆ ತೆರಳಿ ಸಂಪೂರ್ಣ ಮಾಹಿತಿ ಪಡೆದು ಮನೆಯ ಎಲ್ಲರ ಮತದಾನದ ಚೀಟಿ ಸ್ವೀಕರಿಸಬಹುದು. ಎಲ್ಲಿಯೂ ಮಾಹಿತಿ ಪಡೆಯದಿದ್ದವರು ಮತದಾನ ಮಾಡುವ ಮೊದಲು ಮತಗಟ್ಟೆಯಲ್ಲಿ ಒಂದು ಓಟಿಗೆ ಸಮನಾಗಿ ರೂ.100/– ದಂಡ ಕಟ್ಟಿ ಮತದಾನದ ಚೀಟಿ ಪಡೆಯಬೇಕು.
* ದೇಶ(ಲೋಕಸಭೆ ಚುನಾವಣೆಗೆ) ಅಥವಾ ರಾಜ್ಯದಲ್ಲೇ(ವಿಧಾನಸಭೆ ಚುನಾವಣೆಗೆ) ಇದ್ದು–ಕೊಂಡು ಓಟು ಕೂಡ ಇದ್ದು ಓಟು ಹಾಕದಿದ್ದವರು ಶಾಲೆಗೆ ಹೋಗದವರು ಹಾಗು 10ನೇ ತರಗತಿ ತನಕ ಕಲಿತವರು ರೂ.500/– ಮತ್ತು ಅದಕ್ಕಿಂತ ಹೆಚ್ಚಿನ ಶಿಕ್ಷಣ ಪಡೆದವರು ರೂ.1000/– ದಂಡವನ್ನು ಯಾವುದೇ ಸರ್ಕಾರಿ ಕಛೇರಿಯಲ್ಲಿ ಅಥವಾ ಸರ್ಕಾರ ರಚಿಸಿದ ಆನ್‌ಲೈನ್ ಖಾತೆಯಲ್ಲಿ ಕಟ್ಟಬೇಕು. ದಂಡವು ಅನಾರೋಗ್ಯದಿಂದಾಗಿ ಆಸ್ಪತ್ರೆಯಲ್ಲಿ ದಾಖಲಾದವರಿಗೆ ಹಾಗೂ ಅವರನ್ನು ನೋಡಿಕೊಳ್ಳುತ್ತಿರುವ ಕೇವಲ ಒಬ್ಬರಿಗೆ ಮಾತ್ರ ಅನ್ವಯವಾಗುವುದಿಲ್ಲ. ಅವರು ವೈದ್ಯರ ಸರ್ಟಿಫೀಕೆಟ್ ಪಡೆದು ತಮ್ಮ ಪಂಚಾಯತ್‌ಗೆ ಸಲ್ಲಿಸಬೇಕು.
* ದಂಡವು ಮತದಾರ ಬೇರೆ ರಾಜ್ಯ (ವಿಧಾನಸಭೆ ಚುನಾವಣೆ) ಅಥವಾ ದೇಶ(ಲೋಕಸಭೆ ಚುನಾವಣೆ) ದಲ್ಲಿದ್ದರೆ ಅನ್ವಯವಾಗದಿರಲಿ. ದಂಡವನ್ನು ಆನ್‌ಲೈನ್ ಮುಖಾಂತರ ಕೂಡ ಕಟ್ಟಲು ಅವಕಾಶ ನೀಡಬೇಕು. ದಂಡವನ್ನು ಚುನಾವಣೆ ಮುಗಿದು 15ದಿನಗಳ ನಂತರ ಕಟ್ಟುವವರಿಗೆ ತಿಂಗಳೊಂದಕ್ಕೆ ರೂ.500/– ಏರಿಕೆಯಾಗುತ್ತಾ ಹೋಗಬೇಕು ಹಾಗೂ ಚುನಾವಣೆ ಮುಗಿದು 6 ತಿಂಗಳೊಳಗೆ ಕಟ್ಟಿಲ್ಲವೆಂದರೆ ದೇಶದಲ್ಲಿ ಆತನ ಎಲ್ಲಾ ಬ್ಯಾಂಕ್ ಖಾತೆಯ ಚಟುವಟಿಕೆಯನ್ನು ಸ್ಥಗಿತಗೊಳಿಸಬೇಕು ಮತ್ತು ಆತನ ಯಾವುದೇ ಗುರುತಿನ ಚೀಟಿಗಳಿಗೆ ಮಾನ್ಯತೆ ಇರಬಾರದು. ಪುನಃ ಮಾನ್ಯತೆ ಪಡೆಯಲು ಆ ತಿಂಗಳವರೆಗಿನ ಒಟ್ಟು ದಂಡವನ್ನು ಸೇರಿಸಿ ಕಟ್ಟಬೇಕು.
* ಎಲ್ಲಾ ರೀತಿಯಲ್ಲಿ ಸುಲಭ ಮತದಾನಕ್ಕೆ ಅವಕಾಶಗಳನ್ನು ಕಲ್ಪಿಸಿಕೊಟ್ಟ ಮೇಲೂ ಯಾವುದೇ ಮತದಾರ ಸಾಲಾಗಿ ಮೂರು ಚುನಾವಣೆಯನ್ನು ತಪ್ಪಿಸಿಕೊಂಡಲ್ಲಿ ಆತನ ಮತದಾನ ಚೀಟಿಯನ್ನು ರದ್ದುಪಡಿಸಬೇಕು ಹಾಗು ಆತ ದಂಡ ಕಟ್ಟಿ ಪುನಃ ಮತದಾನದ ಚೀಟಿ ನವೀಕರಿಸಿಕೊಳ್ಳುವ ತನಕ ದೇಶದಲ್ಲಿ ಆತನ ಎಲ್ಲಾ ಬ್ಯಾಂಕ್ ಖಾತೆಯ ಚಟುವಟಿಕೆಯನ್ನು ಸ್ಥಗಿತಗೊಳಿಸಬೇಕು ಮತ್ತು ಆತನ ಯಾವುದೇ ಗುರುತಿನ ಚೀಟಿಗಳಿಗೆ ಮಾನ್ಯತೆ ಇರಬಾರದು.
* ಚುನಾವಣಾ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಚುನಾವಣಾ ಆಯೋಗ ಘೋಷಣೆ ಮಾಡಿದ ನಂತರ ಪ್ರತೀ ವಾರ್ಡ್‌ಗಳಲ್ಲಿ ರಾತ್ರಿ–ಹಗಲು ಪಾಳ್ಯದಲ್ಲಿ ಪೋಲೀಸರು ಗಸ್ತು ಹಾಕಬೇಕು. ಅಗತ್ಯವಿರುವ ಕಡೆ ಸೇನೆಯನ್ನು ಬಳಸಿಕೊಳ್ಳಬೇಕು.
* ಚುನಾವಣಾ ಅಧಿಕಾರಿಗಳು ಮನೆಮನೆಗೆ ತೆರಳಿ ಪ್ರಚಾರ ನೀಡುವಾಗ ಅಭ್ಯರ್ಥಿಗಳ ಆಸ್ತಿ ವಿವರ, ಕ್ರಿಮಿನಲ್ ಕೇಸು ವಿವರ, ವಿದ್ಯಾರ್ಹತೆ ಕುರಿತು ಸಂಪೂರ್ಣ ಮಾಹಿತಿಯನ್ನು ಎ4 ಶೀಟ್ ಸೈಜ್‌ನ ಪೇಪರಿನ ಮೊದಲ ಪುಟದಲ್ಲಿ ಹಾಗೂ ಅವರ ಅಥವಾ ಪಕ್ಷದ ಗುರಿ, ಧೋರಣೆಗಳು ಇದ್ದರೆ 2ನೇ ಪುಟದಲ್ಲಿ ಪ್ರಕಟಿಸಿ ಅಭ್ಯರ್ಥಿಯ ಕ್ರ.ಸಂ., ಚಿಹ್ನೆ, ಹೆಸರು, ಪೋಟೋ ನಮೂದಿಸಿದ ಭಿತ್ತಿಪತ್ರವನ್ನು ಪ್ರತೀ ಮನೆಗೊಂದರಂತೆ ನೀಡಬೇಕು.
* ಚುನಾವಣಾ ಅಧಿಕಾರಿಗಳು ಯಾವುದೇ ವ್ಯಕ್ತಿ ಅಥವಾ ಪಕ್ಷದ ಪರವಾಗಿ ಪ್ರಚಾರ ಮಾಡುವುದು ಕಂಡುಬಂದಲ್ಲಿ ಆತನು ಬಾರಿ ದಂಡದೊಂದಿಗೆ ಕೆಲಸ ಕಳೆದುಕೊಳ್ಳುವುದರ ಜೊತೆಗೆ ಜೈಲುಶಿಕ್ಷೆ ನೀಡಬೇಕು.
* ಪ್ರಚಾರ ಸಮಯದಲ್ಲಿ ಯಾವುದೇ ವ್ಯಕ್ತಿ ಅನುಚಿತವಾಗಿ ವರ್ತಿಸಿದಲ್ಲಿ ಆತನಿಗೆ ಬಾರೀ ದಂಡದೊಂದಿಗೆ ಜೈಲು ಶಿಕ್ಷೆ ಕೂಡ ಇರಬೇಕು.
* ಅಧಿಕಾರಿಗಳಿಂದ ಚುನಾವಣಾ ಪ್ರಚಾರದ ಮಾಹಿತಿಯನ್ನು ಪಡೆದ ಹಾಗೂ ಪಡೆಯದಿದ್ದ ಮನೆಯ ಮತದಾರರ ಪಟ್ಟಿಯು ಮತಗಟ್ಟೆಯಲ್ಲಿ ಇರಬೇಕು. ಆ ಪಟ್ಟಿ ಕಂಪ್ಯೂಟರೈಸಡ್ ಕೂಡ ಆಗಿರಬೇಕು.

ಈ ರೀತಿಯಾಗಿ ಚುನಾವಣೆಯನ್ನು ಶಿಸ್ತಿನಿಂದ ಕಟ್ಟುನಿಟ್ಟಾಗಿ ನಡೆಸಿದರೆ ಸರ್ಕಾರದ ಕೋಟಿ–ಕೋಟಿ ಹಣ ಉಳಿಯುವುದರ ಜೊತೆಗೆ ಸಾರ್ವಜನಿಕರಿಗೆ ಕಿರಿಕಿರಿ ಕೂಡ ಕಡಿಮೆಯಾಗುತ್ತದೆ ಹಾಗೂ ಭ್ರಷ್ಟಾಚಾರ ಕೂಡ ಕಡಿಮೆಯಾಗುತ್ತದೆ ಮತ್ತು ವ್ಯವಹಾರವನ್ನು ಮೀರಿ ದಂಧೆಯಾಗಿರುವ ನಮ್ಮ ದೇಶದ ರಾಜಕೀಯ ವ್ಯವಸ್ಥೆ ಪಾರದರ್ಶಕವಾಗಿ ಪ್ರಾಮಾಣಿಕ ಹಾದಿ ಹಿಡಿಯುತ್ತದೆ. ಹಾಗೆಯೇ ಚುನಾವಣಾ ಕ್ರಮ ಬಹಳ ಸರಳವಾಗಿ ನಡೆಯುವುದಲ್ಲದೇ ದೇಶದ ಪ್ರತಿಯೊಬ್ಬ ಪ್ರಜೆಗೂ ಆ ಒಂದು ವ್ಯವಸ್ಥೆಯಲ್ಲಿ ಸುಲಭವಾಗಿ ಸ್ಪರ್ಧಿಸುವಂತಾಗುತ್ತದೆ. ಸಧ್ಯ ಜನಸಾಮಾನ್ಯರು ರಾಜಕೀಯದ ಬಗ್ಗೆ ಕನಸು ಕಾಣಲು ಕೂಡ ಭಯಪಡಬೇಕು ಅಂತ ರಾಜಕೀಯ ವ್ಯವಸ್ಥೆಯನ್ನು ಭ್ರಷ್ಟ ರಾಜಕಾರಣಿಗಳು ಅಸಹ್ಯ ಮಾಡಿಟ್ಟಿರುವುದು.!

ಮೇಲಿನ ಎಲ್ಲಾ ವಿಚಾರಗಳಿಗೆ ಪರಿಹಾರ ತರಲು ಕೇವಲ ವಿದ್ಯಾರ್ಥಿಗಳು ಹಾಗೂ ಯುವಜನತೆಯಿಂದ ಮಾತ್ರ ಸಾಧ್ಯ. ಏಕೆಂದರೆ ನಾನು 2018ರ ವಿಧಾನ ಸಭಾ ಚುನಾವಣೆ ಹಾಗೂ 2020ರ ಗ್ರಾಮ ಪಂಚಾಯತ್ ಚುನಾವಣೆಯನ್ನು ಬಹಳ ಹತ್ತಿರದಿಂದ ಅದರ ಒಂದು ಭಾಗವಾಗಿ ನೋಡಿದವನು. ರಾಜಕೀಯ ತುಂಬಾ ಸರಳವಾಗಿದೆ ಆದರೆ ನಾವದನ್ನು ಅರ್ಥಮಾಡಿಕೊಳ್ಳಬೇಕಷ್ಟೆ. ಚುನಾವಣೆಯಲ್ಲಿ ಮತ ಚಲಾಯಿಸುವಾಗ ಯೋಚಿಸಿ ತಮ್ಮ ಹಕ್ಕು ಚಲಾಯಿಸಿ..

ವಿ.ಸೂ.:– ಈ ಒಂದು **"ಚುನಾವಣೆ"** ವಿಚಾರ ನಮ್ಮ ಪತ್ರಿಕೆಯ ಪ್ರತೀ ಸಂಚಿಕೆಯಲ್ಲಿಯೂ ಪ್ರಕಟವಾಗುತ್ತದೆ. ಕಾರಣ **"ಈಗಿನ ಕಾಲದ ವಿದ್ಯಾವಂತರಿಗೆ ಸಮಾಜದ ವಾಸ್ತವದ ನೈಜತೆಯನ್ನು ಅರಿತುಕೊಳ್ಳಲು ಅವರ ಕಿವಿ ತಮಟೆಯ ಪದರ, ಕಣ್ಣಿನ ಪೊರೆ, ಮೆದುಳಿನ ಹೊದಿಕೆ, ಹೃದಯದ ಕವಚ ತಡೆಗೋಡೆಯಂತಾಗಿವೆ.!"** ಅಂತ ನನಗನಿಸಿರುವುದರಿಂದ. ಹಾಗೆಯೇ ಈ ವಿಷಯಕ್ಕೆ ಪೂರಕವಾಗಿ ಸಾರ್ವಜನಿಕರು ಬರೆದು ಕಳುಹಿಸಿದರೆ, ಅದು ನಮಗೆ ಸರಿ ಅನಿಸಿದರೆ ಅದನ್ನು ಇದರ ಜೊತೆಗೆ ಸೇರಿಸುತ್ತೇವೆ.

**ಸಂಪಾದಕರ ನುಡಿ**

**"ನಿಮ್ಮ ಮೌಲ್ಯ ತಿಳಿದವರಿಗೆ ಮೃದುವಾಗಿ, ಅವಕಾಶವಾದಿಗಳಿಗೆ ಶಿಲೆಯಾಗಿ". –ಮತ**

**"ಸಮಾಜದ ವಾಸ್ತವದ ನೈಜತೆಯನ್ನರಿಯಲು ವಿದ್ಯಾರ್ಥಿಗಳಿಂದ, ಯುವಜನತೆಗಾಗಿ, ಸಮಾಜಕ್ಕೋಸ್ಕರ ಇರುವ ವೇದಿಕೆ"..**

Edited and Owned by: Mahesha Thadekallu, Shop No. 2-107/2(15)3, "Sri Laxmi Arcade", Chanthar Village, Brahmavara, Udupi District-576213
Published by: KSF Private Limited, Brahmavara, Udupi-576213
Printed at: Digantha Mudrana Limited, Industrial Estate, Yeyyadi, Mangalore - 575008
Website: www.yuvakaravali.com Email: ksfprivatelimited25@gmail.com Mob: 7204708427, 8970015524